KACD410002462021

RAGHURAMA N S Digitally signed by RAGHURAMA N S Date: 2026.06.17 10:33:52 +0530

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹೊಳಲ್ಕೆರೆ.**

**ಉಪಸ್ಥಿತರು**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

**ದಿನಾಂಕ 16 ನೇ ಜೂನ್, 2026**

**ಆರ್.ಎ. ಸಂಖ್ಯೆ-4/2021**

ಮೇಲ್ಮನವಿದಾರರುಃ 1. ಶ್ರೀಮತಿ ಮಸಿಯಮ್ಮ ಕೋಂ ರುದ್ರಪ್ಪ,
ಬಿನ್ ಲೇಟ್ ಚಂದ್ರಪ್ಪ,
ವಯಸ್ಸುಃ ಸುಮಾರು 55 ವರ್ಷ,
ಉದ್ಯೋಗಃ ಜಿರಾಯ್ತುದಾರರು,
ವಾಸಃ ಪುಣಜೂರು ಗ್ರಾಮ,
ಕಸಬಾ ಹೋಬಳಿ, ಹೊಳಲ್ಕೆರೆ ತಾಲ್ಲೂಕು.

2. ದಾಸಪ್ಪ ಬಿನ್ ಲೇಟ್ ಚಂದ್ರಪ್ಪ
ಪೌತಿ ವಾರಸುದಾರರುಃ-

2(ಎ). ಓಂಕಾರಮ್ಮ ಕೋಂ ಲೇಟ್ ದಾಸಪ್ಪ,
ವಯಸ್ಸುಃ ಸುಮಾರು 52 ವರ್ಷ,

2(ಬಿ). ಶ್ರೀಧರ ಬಿನ್ ಲೇಟ್ ದಾಸಪ್ಪ,
ವಯಸ್ಸುಃ ಸುಮಾರು 36 ವರ್ಷ,

2(ಸಿ). ಸುನೀಲ್ ಬಿನ್ ಲೇಟ್ ದಾಸಪ್ಪ,
ವಯಸ್ಸುಃ ಸುಮಾರು 33 ವರ್ಷ,

2(ಎ) ರಿಂದ (ಸಿ) ರವರು ಜಿರಾಯ್ತುದಾರರು
ಮತ್ತು ವಾಸಃ ವಡ್ಡರ ಸಿದ್ದವ್ವನಹಳ್ಳಿ ಗ್ರಾಮ,
ಹಿರೇಗುಂಟನೂರು ಹೋಬಳಿ, ಚಿತ್ರದುರ್ಗ ತಾಲ್ಲೂಕು.

2(ಡಿ). ಶೃತಿ ಕೋಂ ಅಶೋಕ,
ಬಿನ್ ಲೇಟ್ ದಾಸಪ್ಪ,
ವಯಸ್ಸುಃ ಸುಮಾರು 30 ವರ್ಷ,
ಉದ್ಯೋಗಃ ಮನೆಗೆಲಸ,
ವಾಸಃ ಪುಣಜೂರು ವಡ್ಡರಹಟ್ಟಿ ಗ್ರಾಮ,
ಕಸಬಾ ಹೋಬಳಿ, ಹೊಳಲ್ಕೆರೆ ತಾಲ್ಲೂಕು.

3. ತಿಮ್ಮರಾಜು ಬಿನ್ ಲೇಟ್ ಚಂದ್ರಪ್ಪ,
ವಯಸ್ಸುಃ ಸುಮಾರು 41 ವರ್ಷ,
ಉದ್ಯೋಗಃ ಜಿರಾಯ್ತುದಾರರು,
ವಾಸಃ ಕೆ. ಲಕ್ಷ್ಮೀಸಾಗರ ಗ್ರಾಮ,
ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

(ಪ್ರತಿನಿಧಿಸುವವರುಃ ಶ್ರೀ ಎಂ. ಶಿವಶಂಕರ, ನ್ಯಾಯವಾದಿಗಳು)

**- ವಿರುದ್ಧ -**

ಎದುರುದಾರರುಃ 1. ಶ್ರೀಮತಿ ಗೌರಮ್ಮ
ಕೋಂ ಲೇಟ್ ನಾಗೇಂದ್ರಪ್ಪ,
ಪೌತಿ ವಾರಸುದಾರರುಃ-

1(ಎ). ಲಕ್ಷ್ಮಮ್ಮ ಕೋಂ ಚಂದ್ರಪ್ಪ,
ವಯಸ್ಸುಃ ಸುಮಾರು 50 ವರ್ಷ,
ಉದ್ಯೋಗಃ ಮನೆಗೆಲಸ,

1(ಬಿ). ಶ್ರೀಮತಿ ಜಯಮ್ಮ

ಕೋಂ ಲೇಟ್ ತಿಪ್ಪೇಸ್ವಾಮಿ,
ವಯಸ್ಸುಃ ಸುಮಾರು 45 ವರ್ಷ,

1(ಸಿ). ವಸಂತಮ್ಮ ಕೋಂ ರಮೇಶಪ್ಪ,
ವಯಸ್ಸುಃ ಸುಮಾರು 42 ವರ್ಷ,
ಉದ್ಯೋಗಃ ಮನೆಗೆಲಸ,

1(ಬಿ) ಮತ್ತು (ಸಿ) ರವರ
ವಾಸಃ ವಡ್ಡರ ಸಿದ್ದವ್ವನಹಳ್ಳಿ ಗ್ರಾಮ,
ಭರಮಸಾಗರ ಹೋಬಳಿ, ಚಿತ್ರದುರ್ಗ ತಾಲ್ಲೂಕು.

1(ಡಿ). ಉಮೇಶ ಬಿನ್ ಲೇಟ್ ನಾಗೇಂದ್ರಪ್ಪ,
ವಯಸ್ಸುಃ ಸುಮಾರು 40 ವರ್ಷ,
ಉದ್ಯೋಗಃ ವ್ಯವಸಾಯಗಾರರು,

1(ಇ). ಬಸವರಾಜ ಬಿನ್ ಲೇಟ್ ನಾಗೇಂದ್ರಪ್ಪ,
ವಯಸ್ಸುಃ ಸುಮಾರು 37 ವರ್ಷ,
ಉದ್ಯೋಗಃ ವ್ಯವಸಾಯಗಾರರು,

1(ಎ), (ಡಿ) ಮತ್ತು (ಇ) ರವರ
ವಾಸಃ ಉಗಣೇಕಟ್ಟೆ ವಡ್ಡರಹಟ್ಟಿ ಗ್ರಾಮ,
ರಾಮಗಿರಿ ಹೋಬಳಿ, ಹೊಳಲ್ಕೆರೆ ತಾಲ್ಲೂಕು.

2. ನಾಗೇಂದ್ರಪ್ಪ ಬಿನ್ ಲೇಟ್ ಸೀನಪ್ಪ,
ವಯಸ್ಸುಃ ಸುಮಾರು 68 ವರ್ಷ,
ಉದ್ಯೋಗಃ ಜಿರಾಯ್ತುದಾರರು,

3. ಗಂಗಮ್ಮ ಕೋಂ ಲೇಟ್ ಮೂಡ್ಲಪ್ಪ,
ವಯಸ್ಸುಃ ಸುಮಾರು 63 ವರ್ಷ,
ಉದ್ಯೋಗಃ ಜಿರಾಯ್ತುದಾರರು,

2 ಮತ್ತು 3 ನೇ ಎದುರುದಾರರ
ವಾಸಃ ಕೆ. ಲಕ್ಷ್ಮೀಸಾಗರ ಗ್ರಾಮ,
ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

(1(ಎ) ಎದುರುದಾರರ ಪರ ಪ್ರತಿನಿಧಿಸುವವರುಃ ಶ್ರೀ ಕೆ. ಸತ್ಯನಾರಾಯಾಣ, ನ್ಯಾಯವಾದಿಗಳು, 2 ಮತ್ತು 3 ನೇ ಎದುರುದಾರರ ಪರ ಪ್ರತಿನಿಧಿಸುವವರುಃ ಶ್ರೀ ಎನ್.ಪಿ. ಹೇಮಂತಕುಮಾರ್ ಮತ್ತು 1(ಬಿ) ರಿಂದ (ಇ) ಎದುರುದಾರರು - ಏಕತರ್ಪೀಯ)

| | | | | |
|---|---|---|---|---|
| 1 | ಮೇಲ್ಮನವಿ ದಾಖಲಿಸಿದ ದಿನಾಂಕ | 17.02.2021 | | |
| 2 | ಮೇಲ್ಮನವಿ ಸ್ವರೂಪ | ವಿಚಾರಣಾ ನ್ಯಾಯಾಲಯವಾದ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳಲ್ಕೆರೆಯ ಅಸಲು ದಾವಾ ಸಂಖ್ಯೆ-67/2018 ರ ದಿನಾಂಕ 08.06.2020 ರ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಲು ಕೋರಿ ಸಲ್ಲಿಸಿದ ಮೇಲ್ಮನವಿ. | | |
| 3 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 16.06.2026 | | |
| 4 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | 05 | 03 | 30 |

*****

**-:: ತೀರ್ಪು ::-**

ಈ ಮೇಲ್ಮನವಿದಾರರು ವಿಚಾರಣಾ ನ್ಯಾಯಾಲಯದಲ್ಲಿ ವಾದಿಯರಾಗಿದ್ದು, ಪ್ರಸ್ತುತ ಈ ಮೇಲ್ಮನವಿಯನ್ನು ಹೊಳಲ್ಕೆರೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿನ ಅಸಲು ದಾವಾ ಸಂಖ್ಯೆ-67/2018 ರ ದಿನಾಂಕ 08.06.2020 ರಂದು ನೀಡಿರುವಂತಹ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ, ಮೇಲ್ಮನವಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ. ಮೇಲ್ಮನವಿ

ದಾರರು ಪ್ರಸ್ತುತ ಈ ಮೇಲ್ಮನವಿಯಲ್ಲಿ ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 41 ನಿಯಮ 27 ಸಹವಾಚಕ ಕಲಂ 151 ರ ಅಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ-8 ಮತ್ತು 9 ನ್ನು ಸಲ್ಲಿಸಿ, ಸದರಿ ಅರ್ಜಿಗಳೊಂದಿಗೆ ಹಾಜರುಪಡಿಸಿರುವ ದಾಖಲಾತಿಗಳ ಕುರಿತು ಹೆಚ್ಚುವರಿ ಸಾಕ್ಷ್ಯ ಮಾಡಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಪ್ರಸ್ತುತ ಈ ಮೇಲ್ಮನವಿಯನ್ನು ತೀರ್ಪಿಗಾಗಿ ನಿಗದಿಪಡಿಸಿದ್ದು, ಹಾಗಾಗಿ ಈ ಹಂತದಲ್ಲಿ ಮೇಲ್ಮನವಿದಾರರು ಸಲ್ಲಿಸಿರುವಂತಹ ಮಧ್ಯಂತರ ಅರ್ಜಿಗಳ ಕುರಿತಾಗಿ ನಿರ್ಣಯಿಸುವ ಅಗತ್ಯತೆ ಇದ್ದು, ಆದ್ದರಿಂದ ಈ ಕೆಳಕಂಡಂತೆ ಆದೇಶಿಸಲಾಗುತ್ತದೆ.

2. ಪಕ್ಷಗಾರರು ವಿಚಾರಣಾ ನ್ಯಾಯಾಲಯದಲ್ಲಿ ಯಾವ ಶ್ರೇಯಾಂಕ ದಲ್ಲಿದ್ದರೋ ಸ್ಪಷ್ಟತೆ ಮತ್ತು ಅನುಕೂಲಕ್ಕಾಗಿ ಅದೇ ಶ್ರೇಯಾಂಕದಲ್ಲಿ ಸದರಿರವರನ್ನು ಉಲ್ಲೇಖಿಸಲಾಗುತ್ತದೆ.

3. ವಾದಿಯರು ಸಲ್ಲಿಸಿರುವ ವಾದಪತ್ರದಲ್ಲಿನ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-

ವಾದಿಯರು ಮತ್ತು ಪ್ರತಿವಾದಿಯ ವಂಶವೃಕ್ಷದ ಕುರಿತು ಉಲ್ಲೇಖಿಸಿದ್ದು, ಅದರಂತೆ ಹನುಮಣ್ಣ ವಡ್ಡರವರು ಕುಟುಂಬದ ಪೂರ್ವಜರಾಗಿದ್ದು, ಸದರಿರವರಿಗೆ ತಿಮ್ಮಪ್ಪ ಯಾನೆ ತಿಮ್ಮಣ್ಣ ಎಂಬ ಮಗನಿದ್ದು, ಸದರಿರವರು ತಿಮ್ಮಕ್ಕ ಎಂಬುವವರನ್ನು ವಿವಾಹವಾಗಿದ್ದು, ಈ ಮೇಲ್ಕಂಡ ಎಲ್ಲರೂ ಸಹ ಮೃತಪಟ್ಟಿದ್ದು, ಸದರಿ ತಿಮ್ಮಪ್ಪ ಮತ್ತು ತಿಮ್ಮಕ್ಕ ದಂಪತಿಗೆ ತಿಮ್ಮಣ್ಣ, ದಾಸಪ್ಪ, ಸೀನಪ್ಪ ಮತ್ತು ಮೂಡ್ಲಪ್ಪ ಎಂಬ ಮಕ್ಕಳಿದ್ದು, ವಾದಿಯರು ದಾಸಪ್ಪರವರ ಮಗನಾದ ಚಂದ್ರಪ್ಪರವರ ಮಕ್ಕಳಾಗಿದ್ದು, ಹಾಗಾಗಿ ಸದರಿ ಮೃತ ಚಂದ್ರಪ್ಪ ಮತ್ತು ಮೃತ ತಿಮ್ಮವ್ವರವರ ವಾರಸುದಾರರಾಗಿ ರುವುದು ಕಂಡುಬರುತ್ತದೆ. ವಾದಿಯರು ಮತ್ತು ಪ್ರತಿವಾದಿಯು ದಾವಾ ಅನುಸೂಚಿತ ಸ್ವತ್ತುಗಳ ಮಾಲೀಕರಾಗಿ ಹಕ್ಕುದಾರರಾಗಿದ್ದು, ಸ್ವಾಧೀನಾನುಭವವನ್ನು ಹೊಂದಿ ರುತ್ತಾರೆ. ವಾದಿಯರ ಅಜ್ಜನಾದ ದಾಸಪ್ಪ ಮತ್ತು ಪ್ರತಿವಾದಿಯ ತಂದೆಯಾದ ತಿಮ್ಮಣ್ಣರವರಿಗೆ ದಾವಾ ಅನುಸೂಚಿತ ಸ್ವತ್ತುಗಳು ತಿಮ್ಮಪ್ಪ ಯಾನೆ ತಿಮ್ಮಣ್ಣರವರಿಂದ

ಬಂದಂತಹ ಸ್ವತ್ತುಗಳಾಗಿರುತ್ತವೆ. ಸದರಿ ತಿಮ್ಮಪ್ಪ ಯಾನೆ ತಿಮ್ಮಣ್ಣರವರ ತಂದೆ ಅಂದರೆ ವಾದಿಯರ ಮುತ್ತಜ್ಜನಾದ ಹನುಮಣ್ಣರವರ ಹೆಸರಿನಲ್ಲಿ ದಾವಾ ಸ್ವತ್ತುಗಳ ಖಾತೆ ನಮೂದಾಗಿದ್ದು, ವಾದಿಯರ ಅಜ್ಜನಾದ ದಾಸಪ್ಪ ಮತ್ತು ಪ್ರತಿವಾದಿಯ ತಂದೆಯಾದ ತಿಮ್ಮಣ್ಣರವರು ಸ್ವಾಧೀನಾನುಭವದಲ್ಲಿದ್ದಾರೆ. ಸದರಿ ಹನುಮಣ್ಣ, ತಿಮ್ಮಪ್ಪ ಯಾನೆ ತಿಮ್ಮಣ್ಣ, ತಿಮ್ಮಣ್ಣ ಹಾಗೂ ದಾಸಪ್ಪರವರು ಮೃತಪಟ್ಟಿರುತ್ತಾರೆ. ಆ ನಂತರದಲ್ಲಿ ವಾದಿಯರ ತಂದೆಯಾದ ಚಂದ್ರಪ್ಪ ಹಾಗೂ ಪ್ರತಿವಾದಿ ದಾವಾ ಸ್ವತ್ತುಗಳ ಸ್ವಾಧೀನಾನುಭವದಲ್ಲಿದ್ದು, ನಂತರ ವಾದಿಯರ ತಂದೆಯಾದ ಚಂದ್ರಪ್ಪರವರು ದಿನಾಂಕ 31.12.2014 ರಂದು ಮೃತಪಟ್ಟಿರುತ್ತಾರೆ. ಆ ನಂತರದಲ್ಲಿ ವಾದಿಯರು ಮತ್ತು ಪ್ರತಿವಾದಿಯು ದಾವಾ ಸ್ವತ್ತುಗಳ ಕುರಿತು ಯಾವುದೇ ತಕರಾರು ಇಲ್ಲದೆ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ದಾವಾ ಸರ್ವೇ ನಂಬರಿನಲ್ಲಿ ಒಟ್ಟು 14 ಎಕರೆ 30 ಗುಂಟೆ ಜಮೀನು ಇದ್ದು, ಆ ಪೈಕಿ 4 ಎಕರೆ ಜಮೀನನ್ನು ದಿನಾಂಕ 28.04.1979 ರಂದು ನಾಗೇಂದ್ರಪ್ಪ ಬಿನ್ ಲೇಟ್ ಸೀನಪ್ಪರವರು ವಾದಿಯರ ಅಜ್ಜನಿಗೆ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟು, ಸದರಿ ಜಮೀನನ್ನು ಪಡೆದುಕೊಂಡಿರುತ್ತಾರೆ. ತಿಮ್ಮಪ್ಪ ಯಾನೆ ತಿಮ್ಮಣ್ಣರವರ 4 ನೇ ಮಗನಾದ ಮೂಡ್ಲಪ್ಪ ರವರು ಚನ್ನಗಿರಿ ತಾಲ್ಲೂಕಿನ ಸಂತೆಬೆನ್ನೂರಿನಲ್ಲಿ ಸರ್ವೇ ನಂ.29/1 ಪಿ ನಲ್ಲಿ ಜಮೀನನ್ನು ತನ್ನ ಭಾಗಕ್ಕೆ ತಂದೆಯಿಂದ ಪಡೆದಿರುತ್ತಾರೆ. ಹಾಗಾಗಿ ದಾವಾ ಅನುಸೂಚಿತ ಸ್ವತ್ತುಗಳಲ್ಲಿ ತಿಮ್ಮಪ್ಪ ಯಾನೆ ತಿಮ್ಮಣ್ಣರವರ 3 ಮತ್ತು 4 ನೇ ಮಕ್ಕಳಿಗೆ ಯಾವುದೇ ಹಕ್ಕು, ಅಧಿಕಾರ, ಸ್ವಾಧೀನಾನುಭವ ಇರುವುದಿಲ್ಲ. ದಾವಾ ಸ್ವತ್ತುಗಳ ಕುರಿತು ಪ್ರತಿವಾದಿಗೆ ಯಾವುದೇ ಹಕ್ಕು ಮತ್ತು ಸ್ವಾಧೀನಾನುಭವ ಇರುವುದಿಲ್ಲ. ಪ್ರತಿವಾದಿಯು ವಾದಿಯರನ್ನು ಮರೆಮಾಚಿ, ದಾವಾ ಸ್ವತ್ತಿನ ಖಾತೆಯು ತಿಮ್ಮಣ್ಣ ಬಿನ್ ಹನುಮಣ್ಣ ವಡ್ಡರವರ ಹೆಸರಿನಲ್ಲಿ ಖಾತೆ ಇದ್ದದನ್ನು ಹಾಗೂ ತನ್ನ ತಂದೆಯ ಹೆಸರು ತಿಮ್ಮಣ್ಣ ಬಿನ್ ತಿಮ್ಮಪ್ಪ ಯಾನೆ ತಿಮ್ಮಣ್ಣ ಎಂದು ಇದ್ದರು ಸಹ ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ದಾವಾ ಸ್ವತ್ತಿನ ಪೂರ್ಣ ಸ್ವತ್ತಿನ ಕುರಿತು ಕಂದಾಯ ಅಧಿಕಾರಿಗಳೊಂದಿಗೆ ಶರಿಖಾಗಿ ಎಂ.ಆರ್. ಸಂಖ್ಯೆ-ಹೆಚ್.6/2013-14 ರಂತೆ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ. ಹಾಗಾಗಿ ಸದರಿ ಖಾತೆಯು ವಾದಿಯರ ಹಕ್ಕಿಗೆ

ಯಾವುದೇ ರೀತಿಯಲ್ಲಿಯೂ ಬಂಧನಕಾರಿಯಾಗುವುದಿಲ್ಲ. ಪ್ರತಿವಾದಿಯು ಈ ಮೇಲ್ಕಂಡಂತೆ ವಾದಿಯರಿಗೆ ತಿಳಿಯದಂತೆ ಖಾತೆ ಮಾಡಿಸಿಕೊಂಡಿರುವ ಕುರಿತು ಪ್ರತಿವಾದಿಯನ್ನು ಸಂಪರ್ಕಿಸಿದ್ದು, ಆದಾಗ್ಯೂ ಪ್ರತಿವಾದಿಯು ಹಾರಿಕೆಯ ಉತ್ತರವನ್ನು ನೀಡಿರುತ್ತಾರೆ. ವಾದಿಯರು ಪ್ರತಿವಾದಿಯ ಬಳಿ ದಾವಾ ಅನುಸೂಚಿತ ಸ್ವತ್ತಿನಲ್ಲಿನ ತನ್ನ ಪಾಲಿನ ಅರ್ಧ ಹಿಸ್ಸೆಯನ್ನು ಮತ್ತು ಸ್ವಾಧೀನತೆಯನ್ನು ಕೊಡುವಂತೆ ಪಂಚರ ಸಮಕ್ಷಮ ಕೇಳಿದ್ದು, ಪ್ರತಿವಾದಿಯು ವಾದಿಯರ ಮನವಿಯನ್ನು ಅಲ್ಲಗಳೆದಿರುತ್ತಾರೆ. ಹಾಗಾಗಿ ವಾದಿಯರು ದಾವಾ ಸ್ವತ್ತಿನ ಕುರಿತು ತನ್ನ ಪಾಲಿನ ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನತೆಯನ್ನು ಕೋರಿ ದಾವೆಯನ್ನು ಸಲ್ಲಿಸಿದ್ದು, ದಾವೆಯಲ್ಲಿ ಕೋರಿರುವಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ವಾದಿಯರು ದಾವೆಯನ್ನು ಸಲ್ಲಿಸಿದ ನಂತರದಲ್ಲಿ, 1 ನೇ ಪ್ರತಿವಾದಿಗೆ ದಾವಾ ಸಮನ್ಸ ಜಾರಿಯಾಗಿದ್ದಾಗ್ಯೂ, 1 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಆದ್ದರಿಂದ ಸದರಿರವರನ್ನು ಏಕತರ್ಪೀಯ ಎಂದು ಪರಿಗಣಿಸಿ ಆದೇಶಿಸಿರುತ್ತದೆ. ವಿಚಾರಣಾ ನ್ಯಾಯಾಲಯದಲ್ಲಿ ದಾವೆಯು ವಿಚಾರಣೆಗಾಗಿ ಬಾಕಿ ಇರುವಾಗ, ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, 2 ಮತ್ತು 3 ನೇ ಪ್ರತಿವಾದಿಯರನ್ನು ಸೇರ್ಪಡೆ ಮಾಡಿದ್ದು, ಆದಾಗ್ಯೂ 2 ಮತ್ತು 3 ನೇ ಪ್ರತಿವಾದಿಯರು ವಿಚಾರಣಾ ನ್ಯಾಯಾಲಯದಲ್ಲಿ ಹಾಜರಾಗದ ಕಾರಣ, ಸದರಿರವರನ್ನು ಏಕತರ್ಪೀಯ ಎಂದು ಆದೇಶಿಸಿರುತ್ತದೆ.

5. ಈ ಮೇಲ್ಕಂಡ ವಾದಪತ್ರವನ್ನು ಪರಿಶೀಲಿಸಿ, ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ಈ ಕೆಳಕಂಡ ಅಂಶಗಳನ್ನು ರೂಪಿಸಿರುತ್ತಾರೆಃ-

1. Whether the plaintiffs prove that, the suit schedule properties are the ancestral and joint family properties of themselves and defendants?
2. Whether the plaintiffs are entitled to any share in the suit schedule properties as sought for?
3. What order or decree?

6. ಈ ಮೇಲ್ಕಂಡ ಅಂಶಗಳನ್ನು ರುಜುವಾತುಪಡಿಸಲು 1 ನೇ ವಾದಿಯು ತನ್ನನ್ನು ತಾನು ಪಿ.ಡಬ್ಲೂ-1 ಎಂದು ಸಾಕ್ಷ್ಯ ಮಾಡಿಸಿದ್ದು, ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ, ನಿಪಿ-1 ರಿಂದ 11 ರವರೆಗೆ ದಾಖಲಾತಿಗಳನ್ನು ಹಾಜರುಪಡಿಸಿ ನಿಶಾನಿಸಿರುತ್ತಾರೆ. ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಪಿ.ಡಬ್ಲೂ-1 ರವರನ್ನು ಪಾಟೀಸವಾಲು ಮಾಡಿರುವುದಿಲ್ಲ ಹಾಗೂ ತಮ್ಮ ಪರವಾಗಿ ಸಾಕ್ಷ್ಯ ಮಾಡಿಸಿರುವುದಿಲ್ಲ. ಆದ್ದರಿಂದ ಪ್ರತಿವಾದಿಯರ ಪರವಾಗಿ ಸಾಕ್ಷ್ಯ ಇಲ್ಲವೆಂದು ನ್ಯಾಯಾಲಯವು ತೆಗೆದುಕೊಂಡಿರುತ್ತದೆ. ವಿಚಾರಣಾ ನ್ಯಾಯಾಲಯವು ವಾದಪತ್ರ ಮತ್ತು ವಾದಿಯರ ಪರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಪರಿಶೀಲಿಸಿ, ಅಂಶ ಸಂಖ್ಯೆ-1 ನ್ನು ಸಕಾರಾತ್ಮಕವೆಂದು ಮತ್ತು ಅಂಶ ಸಂಖ್ಯೆ-2 ನ್ನು ಭಾಗಶಃ ಸಕಾರಾತ್ಮಕವೆಂದು ನಿರ್ಣಯಿಸಿ, ವಾದಿಯರು ಸಲ್ಲಿಸಿರುವಂತಹ ದಾವೆಯನ್ನು ಖರ್ಚು ಸಹಿತ ಭಾಗಶಃ ಡಿಕ್ರಿ ಮಾಡಿರುತ್ತದೆ.

7. ಈ ಮೇಲ್ಕಂಡ ತೀರ್ಪು ಮತ್ತು ಡಿಕ್ರಿಯಿಂದ ಬಾಧಿತರಾದ ವಾದಿಯರು ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಈ ಮೇಲ್ಮನವಿಯಲ್ಲಿ ವಾದಿಯರು / ಮೇಲ್ಮನವಿದಾರರು ಈ ಕೆಳಕಂಡ ಸಂಗತಿಗಳು ಹಾಗೂ ನಿಲುವುಗಳನ್ನು ತೆಗೆದು ಕೊಂಡಿದ್ದು, ಸದರಿ ನಿಲುವುಗಳು ಈ ಕೆಳಗಿನಂತಿವೆಃ-

ಮೇಲ್ಮನವಿದಾರರು ಎದುರುದಾರರ ವಿರುದ್ದ ಹೊಳಲ್ಕೆರೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ-67/2018 ರಂತೆ ದಾವೆಯನ್ನು ಸಲ್ಲಿಸಿದ್ದು, ವಿಚಾರಣಾ ನ್ಯಾಯಾಲಯವು ಸದರಿ ದಾವೆಯ ಕುರಿತು ಭಾಗಶಃ ಡಿಕ್ರಿ ಮಾಡಿರುತ್ತದೆ. ಮೇಲ್ಮನವಿದಾರರು ಪ್ರಸ್ತುತ ಈ ಮೇಲ್ಮನವಿಯನ್ನು ಹೊಳಲ್ಕೆರೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ಅಸಲು ದಾವಾ ಸಂಖ್ಯೆ-67/2018 ರ ದಿನಾಂಕ 08.06.2020 ರ ತೀರ್ಪು ಮತ್ತು ಡಿಕ್ರಿಯ ವಿರುದ್ದ ಸಲ್ಲಿಸಿರುತ್ತಾರೆ. ಮೇಲ್ಮನವಿ ದಾರರಾದ ವಾದಿಯರು ಮತ್ತು 1 ನೇ ಎದುರುದಾರರಾದ 1 ನೇ ಪ್ರತಿವಾದಿಯು ದಾವಾ ಅನುಸೂಚಿತ ಸ್ವತ್ತುಗಳ ಮಾಲೀಕರಾಗಿ ಹಕ್ಕುದಾರರಾಗಿದ್ದು, ಸ್ವಾಧೀನಾನುಭವ

ವನ್ನು ಹೊಂದಿರುತ್ತಾರೆ. ಮೇಲ್ಮನವಿದಾರರ ಅಜ್ಜನಾದ ದಾಸಪ್ಪ ಮತ್ತು ಎದುರುದಾರರ ತಂದೆಯಾದ ತಿಮ್ಮಣ್ಣರವರಿಗೆ ದಾವಾ ಅನುಸೂಚಿತ ಸ್ವತ್ತುಗಳು ತಿಮ್ಮಪ್ಪ ಯಾನೆ ತಿಮ್ಮಣ್ಣರವರಿಂದ ಬಂದಂತಹ ಸ್ವತ್ತುಗಳಾಗಿರುತ್ತವೆ. ಸದರಿ ತಿಮ್ಮಪ್ಪ ಯಾನೆ ತಿಮ್ಮಣ್ಣರವರ ತಂದೆ ಅಂದರೆ ಮೇಲ್ಮನವಿದಾರರ ಮುತ್ತಜ್ಜನಾದ ಹನುಮಣ್ಣರವರ ಹೆಸರಿನಲ್ಲಿ ದಾವಾ ಸ್ವತ್ತುಗಳ ಖಾತೆ ನಮೂದಾಗಿದ್ದು, ಮೇಲ್ಮನವಿದಾರರ ಅಜ್ಜನಾದ ದಾಸಪ್ಪ ಮತ್ತು 1 ನೇ ಎದುರುದಾರರ ತಂದೆಯಾದ ತಿಮ್ಮಣ್ಣರವರು ಸ್ವಾಧೀನಾನುಭವ ದಲ್ಲಿದ್ದಾರೆ. ಸದರಿ ಹನುಮಣ್ಣ, ತಿಮ್ಮಪ್ಪ ಯಾನೆ ತಿಮ್ಮಣ್ಣ, ತಿಮ್ಮಣ್ಣ ಹಾಗೂ ದಾಸಪ್ಪರವರು ಮೃತಪಟ್ಟಿರುತ್ತಾರೆ. ಆ ನಂತರದಲ್ಲಿ ಮೇಲ್ಮನವಿದಾರರ ತಂದೆಯಾದ ಚಂದ್ರಪ್ಪ ಹಾಗೂ 1 ನೇ ಎದುರುದಾರರು ದಾವಾ ಸ್ವತ್ತುಗಳ ಸ್ವಾಧೀನಾನುಭವ ದಲ್ಲಿದ್ದು, ನಂತರ ಮೇಲ್ಮನವಿದಾರರ ತಂದೆಯಾದ ಚಂದ್ರಪ್ಪರವರು ದಿನಾಂಕ 31.12.2014 ರಂದು ಮೃತಪಟ್ಟಿರುತ್ತಾರೆ. ಆ ನಂತರದಲ್ಲಿ ಮೇಲ್ಮನವಿದಾರರು ಮತ್ತು 1 ನೇ ಎದುರುದಾರರು ದಾವಾ ಸ್ವತ್ತುಗಳ ಕುರಿತು ಯಾವುದೇ ತಕರಾರು ಇಲ್ಲದೆ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ದಾವಾ ಸರ್ವೇ ನಂಬರಿನಲ್ಲಿ ಒಟ್ಟು 14 ಎಕರೆ 30 ಗುಂಟೆ ಜಮೀನು ಇದ್ದು, ಆ ಪೈಕಿ 4 ಎಕರೆ ಜಮೀನನ್ನು ದಿನಾಂಕ 28.04.1979 ರಂದು ನಾಗೇಂದ್ರಪ್ಪ ಬಿನ್ ಲೇಟ್ ಸೀನಪ್ಪ ರವರು ಮೇಲ್ಮನವಿ ದಾರರ ಅಜ್ಜನಿಗೆ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟು, ಸದರಿ ಜಮೀನನ್ನು ಪಡೆದುಕೊಂಡಿರುತ್ತಾರೆ. ತಿಮ್ಮಪ್ಪ ಯಾನೆ ತಿಮ್ಮಣ್ಣರವರ 4 ನೇ ಮಗನಾದ ಮೂಡ್ಲಪ್ಪರವರು ಚನ್ನಗಿರಿ ತಾಲ್ಲೂಕಿನ ಸಂತೆಬೆನ್ನೂರಿನಲ್ಲಿ ಸರ್ವೇ ನಂ.29/1 ಪಿ ನಲ್ಲಿ ಜಮೀನನ್ನು ತನ್ನ ಭಾಗಕ್ಕೆ ತಂದೆಯಿಂದ ಪಡೆದಿರುತ್ತಾರೆ. ಹಾಗಾಗಿ ದಾವಾ ಅನುಸೂಚಿತ ಸ್ವತ್ತುಗಳಲ್ಲಿ ತಿಮ್ಮಪ್ಪ ಯಾನೆ ತಿಮ್ಮಣ್ಣರವರ 3 ಮತ್ತು 4 ನೇ ಮಕ್ಕಳಿಗೆ ಯಾವುದೇ ಹಕ್ಕು, ಅಧಿಕಾರ, ಸ್ವಾಧೀನಾನುಭವ ಇರುವುದಿಲ್ಲ. ದಾವಾ ಸ್ವತ್ತುಗಳ ಕುರಿತು 1 ನೇ ಎದುರುದಾರರಿಗೆ ಯಾವುದೇ ಹಕ್ಕು ಮತ್ತು ಸ್ವಾಧೀನಾನುಭವ ಇರುವುದಿಲ್ಲ. 1 ನೇ ಎದುರುದಾರರು ಮೇಲ್ಮನವಿದಾರರನ್ನು ಮರೆಮಾಚಿ, ದಾವಾ ಸ್ವತ್ತಿನ ಖಾತೆಯು ತಿಮ್ಮಣ್ಣ ಬಿನ್ ಹನುಮಣ್ಣ ವಡ್ಡರವರ ಹೆಸರಿನಲ್ಲಿ ಖಾತೆ ಇದ್ದದನ್ನು ಹಾಗೂ ತನ್ನ ತಂದೆಯ ಹೆಸರು ತಿಮ್ಮಣ್ಣ ಬಿನ್ ತಿಮ್ಮಪ್ಪ ಯಾನೆ ತಿಮ್ಮಣ್ಣ ಎಂದು

ಇದ್ದರು ಸಹ ಮೇಲ್ಮನವಿದಾರರಿಗೆ ಮೋಸ ಮಾಡುವ ಉದ್ದೇಶದಿಂದ ದಾವಾ ಸ್ವತ್ತಿನ ಪೂರ್ಣ ಸ್ವತ್ತಿನ ಕುರಿತು ಕಂದಾಯ ಅಧಿಕಾರಿಗಳೊಂದಿಗೆ ಶರಿಖಾಗಿ ಎಂ.ಆರ್. ಸಂಖ್ಯೆ-ಹೆಚ್.6/2013-14 ರಂತೆ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ. ಹಾಗಾಗಿ ಸದರಿ ಖಾತೆಯು ಮೇಲ್ಮನವಿದಾರರ ಹಕ್ಕಿಗೆ ಯಾವುದೇ ರೀತಿಯಲ್ಲಿಯೂ ಬಂಧನಕಾರಿ ಯಾಗುವುದಿಲ್ಲ. 1 ನೇ ಎದುರುದಾರರು ಈ ಮೇಲ್ಕಂಡಂತೆ ಮೇಲ್ಮನವಿದಾರರಿಗೆ ತಿಳಿಯದಂತೆ ಖಾತೆ ಮಾಡಿಸಿಕೊಂಡಿರುವ ಕುರಿತು 1 ನೇ ಎದುರುದಾರರನ್ನು ಸಂಪರ್ಕಿಸಿದ್ದು, ಆದಾಗ್ಯೂ 1 ನೇ ಎದುರುದಾರರು ಹಾರಿಕೆಯ ಉತ್ತರವನ್ನು ನೀಡಿರುತ್ತಾರೆ. ಮೇಲ್ಮನವಿದಾರರು 1 ನೇ ಎದುರುದಾರರ ಬಳಿ ದಾವಾ ಅನುಸೂಚಿತ ಸ್ವತ್ತಿನಲ್ಲಿನ ತನ್ನ ಪಾಲಿನ ಅರ್ಧ ಹಿಸ್ಸೆಯನ್ನು ಮತ್ತು ಸ್ವಾಧೀನತೆಯನ್ನು ಕೊಡುವಂತೆ ಪಂಚರ ಸಮಕ್ಷಮ ಕೇಳಿದ್ದು, 1 ನೇ ಎದುರುದಾರರು ಮೇಲ್ಮನವಿದಾರರ ಮನವಿಯನ್ನು ಅಲ್ಲಗಳೆದಿರುತ್ತಾರೆ. ಹಾಗಾಗಿ ಮೇಲ್ಮನವಿದಾರರು ದಾವಾ ಸ್ವತ್ತಿನ ಕುರಿತು ತನ್ನ ಪಾಲಿನ ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನತೆಯನ್ನು ಕೋರಿ ವಿಚಾರಣಾ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದರು. ವಿಚಾರಣಾ ನ್ಯಾಯಾಲಯವು 1 ನೇ ಎದುರುದಾರರಿಗೆ ದಾವಾ ಸಮನ್ಸನ್ನು ಜಾರಿಗೊಳಿಸಿದ್ದು, ಆದಾಗ್ಯೂ ಸದರಿರವರು ವಿಚಾರಣಾ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದರು. ಆ ನಂತರದಲ್ಲಿ ವಿಚಾರಣಾ ನ್ಯಾಯಾಲಯವು ತಿಮ್ಮಪ್ಪ ಯಾನೆ ತಿಮ್ಮಣ್ಣರವರ ಇನ್ನಿಬ್ಬರು ಮೊಮ್ಮಕ್ಕಳ ಹೆಸರನ್ನು ದಾವೆಯಲ್ಲಿ ಸೇರ್ಪಡೆ ಮಾಡುವಂತೆ ಸೂಚಿಸಿದ್ದು, ಹಾಗಾಗಿ ಸದರಿರವರನ್ನು ವಿಚಾರಣಾ ನ್ಯಾಯಾಲಯದಲ್ಲಿ 2 ಮತ್ತು 3 ನೇ ಪ್ರತಿವಾದಿಯರನ್ನಾಗಿ ಸೇರ್ಪಡೆ ಮಾಡಿರುತ್ತಾರೆ. 2 ಮತ್ತು 3 ನೇ ಪ್ರತಿವಾದಿಯರು ಈಗಾಗಲೇ ತಮ್ಮ ಹಿಸ್ಸೆಯ ಕುರಿತು ಪಡೆದುಕೊಂಡಿರುತ್ತಾರೆಂದು, ಹಾಗಾಗಿ ದಾವಾ ಸ್ವತ್ತಿನ ಕುರಿತು ಮೇಲ್ಮನವಿದಾರರಿಗೆ ಮತ್ತು 1 ನೇ ಎದುರುದಾರರಿಗೆ ಮಾತ್ರ ಹಿಸ್ಸೆಯನ್ನು ಮಾಡಿಕೊಡುವಂತೆ ಕೋರಿದ್ದು, ಆದಾಗ್ಯೂ ವಿಚಾರಣಾ ನ್ಯಾಯಾಲಯವು ತಪ್ಪು ನಿರ್ಣಯಕ್ಕೆ ಬಂದು, ತಿಮ್ಮಪ್ಪ ಯಾನೆ ತಿಮ್ಮಣ್ಣನ ನಾಲ್ಕು ಜನ ಮಕ್ಕಳಿಗೂ ತಲಾ 1/4 ನೇ ಹಿಸ್ಸೆಯನ್ನು ನೀಡಿ ಡಿಕ್ರಿ ಮಾಡಿರುತ್ತದೆ. ವಿಚಾರಣಾ ನ್ಯಾಯಾಲಯವು ದಾಸಪ್ಪನ ಜಮೀನಿನಲ್ಲಿ ಎಲ್ಲರಿಗೂ ಸಹ ಹಕ್ಕು ಇದೆ ಎಂದು ನಿರ್ಣಯಿಸಿದ್ದು, ಆದಾಗ್ಯೂ ದಾಸಪ್ಪರವರ ಹೆಸರಿನಲ್ಲಿ ಯಾವುದೇ

ಜಮೀನು ಇರುವುದಿಲ್ಲ. ದಾಸಪ್ಪರವರು ಮೇಲ್ಮನವಿದಾರರಾದ ವಾದಿಯರ ಮುತ್ತಜ್ಜ ಆಗಿರುವುದಿಲ್ಲ, ಬದಲಾಗಿ ಅಜ್ಜನಾಗಿರುತ್ತಾನೆ. 2 ನೇ ಎದುರುದಾರರು ಮತ್ತು ಆತನ ಪತ್ನಿ ಗಂಗಮ್ಮ ಹಾಗೂ ತಾಯಿ ತಿಮ್ಮಕ್ಕ ಎಂದು ಪಹಣಿಯಲ್ಲಿ ನಮೂದಾಗಿರುವುದನ್ನು 3 ನೇ ಎದುರುದಾರರು ಎಂದು ವಿಚಾರಣಾ ನ್ಯಾಯಾಲಯವು ತಪ್ಪು ನಿರ್ಣಯಕ್ಕೆ ಬಂದು, ತಪ್ಪಾಗಿ ಡಿಕ್ರಿ ಮಾಡಿರುತ್ತದೆ. ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿ ಕಾನೂನಿನ ಅಂಶಗಳಿಗೆ ಸಮರ್ಥವಾಗಿರುವುದಿಲ್ಲ. ವಿಚಾರಣಾ ನ್ಯಾಯಾಲಯವು ಮೌಖಿಕ ಮತ್ತು ದಾಖಲಾತಿಯ ಸಾಕ್ಷ್ಯದ ಕುರಿತು ಪರಿಗಣಿಸುವಲ್ಲಿ ವಿಫಲ ವಾಗಿರುತ್ತದೆ. ವಿಚಾರಣಾ ನ್ಯಾಯಾಲಯದ ತೀರ್ಪು ಕಾನೂನಿನ ಅಂಶಗಳಿಗೆ ವ್ಯತಿರಿಕ್ತ ವಾಗಿದ್ದು, ಸಮಬಾಧ್ಯತೆಯನ್ನು ಉಂಟುಮಾಡುತ್ತದೆ. ವಿಚಾರಣಾ ನ್ಯಾಯಾಲಯದ ನಿರ್ಣಯವು ವಕ್ರತೆಯಿಂದ ಕೂಡಿದ್ದು, ಮನಸ್ಸಿಗೆ ಬಂದ ಹಾಗೆ ನೀಡಿರುವಂತಹ ನಿರ್ಣಯದಿಂದ ಕೂಡಿರುತ್ತದೆ. ವಿಚಾರಣಾ ನ್ಯಾಯಾಲಯವು ಅಂಶ ಸಂಖ್ಯೆ-1 ನ್ನು ಸಕಾರಾತ್ಮಕ ಎಂದು ನಿರ್ಣಯಿಸಿದ್ದಾಗ್ಯೂ ಕೂಡ, ಅಂಶ ಸಂಖ್ಯೆ-2 ರ ಕುರಿತು ಭಾಗಶಃ ಸಕಾರಾತ್ಮಕವೆಂದು ತಪ್ಪಾಗಿ ನಿರ್ಣಯಿಸಿರುತ್ತದೆ. ವಿಚಾರಣಾ ನ್ಯಾಯಾಲಯವು ದಾವಾ ಅನುಸೂಚಿತ ಸ್ವತ್ತಿನಲ್ಲಿ ಮೇಲ್ಮನವಿದಾರರಿಗೆ ಮತ್ತು 1 ನೇ ಎದುರುದಾರರಿಗೆ ಮಾತ್ರ ಹಿಸ್ಸೆ ಇದೆ ಎಂಬುದನ್ನು ಗಮನಿಸದೆ ತಪ್ಪು ನಿರ್ಣಯವನ್ನು ನೀಡಿರುತ್ತದೆ. 2 ನೇ ಎದುರುದಾರರಾದ 2 ನೇ ಪ್ರತಿವಾದಿಯು ದಾವಾ ಸರ್ವೇ ನಂಬರಿನಲ್ಲಿ 4 ಎಕರೆ ಜಮೀನನ್ನು ಹಕ್ಕು ಖುಲಾಸೆ ಪತ್ರದ ಮೂಲಕ ಪಡೆದುಕೊಂಡು ಅನುಭವಿಸುತ್ತಿದ್ದು, ಆ ನಂತರದಲ್ಲಿ ದುರಸ್ತಿಯ ನಂತರ ಆತನ ಪತ್ನಿ, ಗಂಗಮ್ಮ ಬಿನ್ ತಿಮ್ಮಕ್ಕರವರು ಅನುಭವಿಸುತ್ತಿರುವುದನ್ನು ಗಮನಿಸಿರುವುದಿಲ್ಲ. ಅಂತೆಯೆ 3 ನೇ ಎದುರುದಾರರಾದ 3 ನೇ ಪ್ರತಿವಾದಿಯ ಪತಿಯಾದ ಮೂಡ್ಲಪ್ಪರವರಿಗೆ ಚನ್ನಗಿರಿ ತಾಲ್ಲೂಕು, ಲಕ್ಷ್ಮೀಸಾಗರ ಗ್ರಾಮದ ಸರ್ವೇ ನಂ.29/1 ಪಿ ರಲ್ಲಿ 4 ಎಕರೆ 19 ಗುಂಟೆ ಜಮೀನನ್ನು ಆತನ ಹಿಸ್ಸೆಗೆ ನೀಡಿದ್ದು, ಆತನ ಮರಣಾನಂತರ 3 ನೇ ಎದುರುದಾರರ ಹೆಸರಿನಲ್ಲಿ ಖಾತೆಯನ್ನು ಮಾಡಿಸಿಕೊಂಡು ಅನುಭವಿಸುತ್ತಿದ್ದಾರೆ. 2 ಮತ್ತು 3 ನೇ ಎದುರುದಾರರು ಈಗಾಗಲೇ ಅವರ ಪಾಲಿನ ಜಮೀನನ್ನು ಪಡೆದುಕೊಂಡು, ದಾಖಲಾತಿಗಳನ್ನು ಸದರಿರವರ ಹೆಸರಿಗೆ ಬದಲಾವಣೆ ಮಾಡಿಕೊಂಡು ಅನುಭವಿಸುತ್ತಿದ್ದು, ಆದಾಗ್ಯೂ ವಿಚಾರಣಾ ನ್ಯಾಯಾ

ಲಯವು ಈ ಅಂಶಗಳನ್ನು ಗಮನಿಸದೆ ತಪ್ಪಾಗಿ ನಿರ್ಣಯಕ್ಕೆ ಬಂದಿರುತ್ತದೆ. ವಿಚಾರಣಾ ನ್ಯಾಯಾಲಯವು ನಿಪಿ-1 ರಿಂದ 3 ರ ಪಹಣಿಗಳಲ್ಲಿ ಮೇಲ್ಮನವಿದಾರರು ಮತ್ತು 1 ನೇ ಎದುರುದಾರರ ಅಜ್ಜನ ಹೆಸರಿನಲ್ಲಿ 10 ಎಕರೆ 30 ಗುಂಟೆ ಜಮೀನು ಇರುವುದನ್ನು ಹಾಗೂ 2 ನೇ ಪ್ರತಿವಾದಿ ಮತ್ತು ಆತನ ಪತ್ನಿಯಾದ ಗಂಗಮ್ಮ ಬಿನ್ ತಿಮ್ಮಕ್ಕರವರ ಹೆಸರಿನಲ್ಲಿ 4 ಎಕರೆ ಜಮೀನು ಜಂಟಿಯಾಗಿ ಖಾತೆ ಮಾಡಿಸಿಕೊಂಡು ಅನುಭವಿಸು ತ್ತಿರುವುದನ್ನು ಗಮನಿಸುವಲ್ಲಿ ವಿಫಲವಾಗಿರುತ್ತದೆ. ವಿಚಾರಣಾ ನ್ಯಾಯಾಲಯವು ನಿಪಿ-4 ರಿಂದ 6 ರ ಪಹಣಿಗಳಲ್ಲಿ ಹಾಗೂ ನಿಪಿ-7 ರ ಎಂ.ಆರ್.ಹೆಚ್.6/2013-14 ರ ಮ್ಯುಟೇಶನ್ ವಹಿಯಂತೆ ಮೇಲ್ಮನವಿದಾರರನ್ನು ಬಿಟ್ಟು, ಸದರಿರವರಿಗೆ ಸೇರಿದ ಜಮೀನನ್ನು 1 ನೇ ಎದುರುದಾರರು ಸುಳ್ಳಿನಿಂದ ಖಾತ ಮಾಡಿಸಿಕೊಂಡಿರುವುದನ್ನು ಗಮನಿಸುವಲ್ಲಿ ವಿಫಲವಾಗಿರುತ್ತದೆ. ವಿಚಾರಣಾ ನ್ಯಾಯಾಲಯವು ಮೇಲ್ಮನವಿದಾರರು ಮತ್ತು ಎದುರುದಾರರು ತಲಾ 1/4 ನೇ ಹಿಸ್ಸೆಯನ್ನು ಪಡೆಯಲು ಅರ್ಹರಿರುತ್ತಾರೆಂದು ತಪ್ಪಾಗಿ ನಿರ್ಣಯಕ್ಕೆ ಬಂದಿರುತ್ತದೆ. 2 ಮತ್ತು 3 ನೇ ಎದುರುದಾರರು ಈಗಾಗಲೇ ತಮ್ಮ ಪಾಲಿನ ಹಿಸ್ಸೆಯನ್ನು ಪಡೆದುಕೊಂಡು ಸ್ವಾಧೀನಾನುಭವವನ್ನು ಹೊಂದಿದ್ದು, ಪಹಣಿಗಳಲ್ಲಿ ಸದರಿರವರ ಹೆಸರು ನಮೂದಾಗಿದ್ದಾಗ್ಯೂ, ವಿಚಾರಣಾ ನ್ಯಾಯಾಲಯವು ಮೇಲ್ಮನವಿದಾರರಿಗೆ ಮತ್ತು 1 ನೇ ಎದುರುದಾರರಿಗೆ ತಲಾ ಅರ್ಧ ಹಿಸ್ಸೆಯನ್ನು ನೀಡುವ ಬದಲಾಗಿ, ಮೇಲ್ಮನವಿದಾರರು ಮತ್ತು ಎದುರುದಾರರಿಗೆ ತಲಾ 1/4 ನೇ ಹಿಸ್ಸೆಯನ್ನು ನೀಡಿರುತ್ತಾರೆ. ಒಟ್ಟಾರೆಯಾಗಿ ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿ ಸ್ಥಾಪಿತ ಕಾನೂನಿನ ಅಂಶಗಳಿಗೆ ವ್ಯತಿರಿಕ್ತವಾಗಿರುತ್ತದೆ. ಹಾಗಾಗಿ ಮೇಲ್ಮನವಿದಾರರು ಸಲ್ಲಿಸಿರುವಂತಹ ಮೇಲ್ಮನವಿಯನ್ನು ಪುರಸ್ಕರಿಸಿ, ಅಸಲು ದಾವಾ ಸಂಖ್ಯೆ-67/2018 ರ ತೀರ್ಪು ಮತ್ತು ಡಿಕ್ರಿಯನ್ನು ರದ್ದುಗೊಳಿಸಿ, ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ, ಮೇಲ್ಮನವಿದಾರರು ಸಲ್ಲಿಸಿರುವ ಮೇಲ್ಮನವಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

8. ಮೇಲ್ಮನವಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-8 ಮತ್ತು 9 ರಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆಃ-

ಮೇಲ್ಮನವಿದಾರರು ಪ್ರಸ್ತುತ ಈ ಮಧ್ಯಂತರ ಅರ್ಜಿಗಳನ್ನು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 41 ನಿಯಮ 27 ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿದ್ದು, ಅರ್ಜಿಗಳಿಗೆ ಪೂರಕವಾಗಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ಪರಿಗಣಿಸಿ, ಅರ್ಜಿಗಳೊಂದಿಗೆ ಹಾಜರುಪಡಿಸಿರುವ ದಾಖಲಾತಿಗಳ ಕುರಿತು ಹೆಚ್ಚುವರಿ ಸಾಕ್ಷ್ಯವನ್ನು ಮಾಡಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಮೇಲ್ಮನವಿ ದಾರರು ಪ್ರಸ್ತುತ ಈ ಮೇಲ್ಮನವಿಯನ್ನು ಎದುರುದಾರರ ವಿರುದ್ದ ಹೊಳಲ್ಕೆರೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ಅಸಲು ದಾವಾ ಸಂಖ್ಯೆ-67/2018 ರ ದಿನಾಂಕ 08.06.2020 ರ ತೀರ್ಪು ಮತ್ತು ಡಿಕ್ರಿಯ ವಿರುದ್ದ ಸಲ್ಲಿಸಿರುತ್ತಾರೆ. ಮೇಲ್ಮನವಿದಾರರು ವಿಚಾರಣಾ ನ್ಯಾಯಾಲಯದಲ್ಲಿ 2 ಮತ್ತು 3 ನೇ ಎದುರುದಾರರ ಹಿಸ್ಸೆಯ ಜಮೀನುಗಳ ಕುರಿತಾಗಿ ದಾಖಲಾತಿಗಳನ್ನು ಆಕಸ್ಮಿಕವಾಗಿ ಸಲ್ಲಿಸದ ಕಾರಣ, ವಿಚಾರಣಾ ನ್ಯಾಯಾಲಯವು ದಾವಾ ಸ್ವತ್ತುಗಳ ಕುರಿತಾಗಿ ತಲಾ 1/4 ನೇ ಹಿಸ್ಸೆಯನ್ನು ನೀಡಿರುತ್ತದೆ. ಈ ಹಿಂದೆಯೆ 2 ಮತ್ತು 3 ನೇ ಎದುರುದಾರರ ಕುಟುಂಬದವರು ಹಿಸ್ಸೆಯನ್ನು ತೆಗೆದುಕೊಂಡು ಅವರವರ ಹೆಸರಿನಲ್ಲಿ ಮ್ಯುಟೇಶನ್ ವಹಿಗಳು ಮತ್ತು ಪಹಣಿಗಳನ್ನು ಪಡೆದು ಕೊಂಡಿದ್ದು, ಸದರಿರವರುಗಳು ಮೃತಪಟ್ಟಿದ್ದು, ಪ್ರಸ್ತುತ ಸದರಿರವರ ಪತ್ನಿ ಮತ್ತು ಮಕ್ಕಳು ಪೌತಿ ಆಧಾರದ ಮೇರೆಗೆ ಖಾತೆಯನ್ನು ಮಾಡಿಸಿಕೊಂಡು ಸ್ವಾಧೀನಾನುಭವ ದಲ್ಲಿದ್ದಾರೆ. 2 ಮತ್ತು 3 ನೇ ಎದುರುದಾರರಿಗೆ ಸೇರಿದ ಸ್ವತ್ತುಗಳ ಕುರಿತಾಗಿ ದಾಖಲಾತಿಗಳ ಕುರಿತು ಹಾಜರುಪಡಿಸಿ ನಿಶಾನಿಸುವ ಅಗತ್ಯತೆ ಇರುತ್ತದೆ. ಮೇಲ್ಮನವಿದಾರರು 3 ನೇ ಎದುರುದಾರರ ಕುಟುಂಬದವರು ಚನ್ನಗಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ-116/2019 ರಂತೆ ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನತೆಯ ಕುರಿತು ಡಿಕ್ರಿ ಪಡೆದುಕೊಂಡಿರುವ ದಾಖಲಾತಿಯನ್ನು ಮತ್ತು 2 ನೇ ಎದುರುದಾರರ ಕುಟುಂಬದವರಿಗೆ ವ್ಯವಸ್ಥಾಪನಾ ಪತ್ರವನ್ನು ಜಾರಿಮಾಡಿಕೊಟ್ಟಿರುವ ದಾಖಲಾತಿಯನ್ನು ಈ ಅರ್ಜಿಗಳೊಂದಿಗೆ ಹಾಜರುಪಡಿಸಲಾಗಿದೆ. 3 ನೇ ಎದುರುದಾರ ಕುಟುಂಬದವರು 6 ಎಕರೆ 19 ಗುಂಟೆ ಸ್ವತ್ತಿನ ಪೈಕಿ 2 ಎಕರೆ ಸ್ವತ್ತನ್ನು ಮಾರಾಟ ಮಾಡಿದ್ದು, ಆ ಕುರಿತು ಕ್ರಯ ಪತ್ರ ಹಾಗೂ ಮ್ಯುಟೇಶನ್ ವಹಿಗಳನ್ನು ಹಾಜರುಪಡಿಸಿದ್ದು, ಸದರಿ

ದಾಖಲಾತಿಗಳ ಕುರಿತು ಕೂಡ ಹಾಜರುಪಡಿಸುವ ಅಗತ್ಯತೆ ಇರುತ್ತದೆ. ಈ ಮೇಲ್ಕಂಡ ದಾಖಲಾತಿಗಳನ್ನು ವಿಚಾರಣಾ ನ್ಯಾಯಾಲಯದಲ್ಲಿ ಹಾಜರುಪಡಿಸಲು ಸಾಧ್ಯವಾಗದ ಕಾರಣ, ಈ ಮೇಲ್ಮನವಿಯ ಹಂತದಲ್ಲಿ ಹಾಜರು ಪಡಿಸಲಾಗಿದೆ. ವಿಚಾರಣಾ ನ್ಯಾಯಾಲಯದಲ್ಲಿ ದಾಖಲಾತಿಗಳನ್ನು ಹಾಜರು ಪಡಿಸದಿರುವಂತಹ ಕ್ರಮವು ದುರುದ್ದೇಶದಿಂದ ಕೂಡಿರುವುದಿಲ್ಲ. ಹಾಗಾಗಿ ಮೇಲ್ಮನವಿ ದಾರರು ಮಧ್ಯಂತರ ಅರ್ಜಿಗಳೊಂದಿಗೆ ಹಾಜರುಪಡಿಸಿರುವ ದಾಖಲಾತಿಗಳ ಕುರಿತು ಹೆಚ್ಚುವರಿ ಸಾಕ್ಷ್ಯ ಮಾಡಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

9. ಮೇಲ್ಮನವಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-8 ಮತ್ತು 9 ಕ್ಕೆ 1(ಎ) ಎದುರುದಾರರ ಪರ ವಕೀಲರು ಸಲ್ಲಿಸಿರುವ ತಕರಾರಿನಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆಃ-

ಮೇಲ್ಮನವಿದಾರರು ಸಲ್ಲಿಸಿರುವ ಅರ್ಜಿಗಳು ಕಾನೂನಿನ ಅಡಿಯಲ್ಲಿ ಊರ್ಜಿತವಾಗುವುದಿಲ್ಲ. ಅರ್ಜಿಗಳೊಂದಿಗೆ ಲಗತ್ತಿಸಿರುವ ದಾಖಲಾತಿಗಳ ಕುರಿತು ಈ ಹಂತದಲ್ಲಿ ಪುರಸ್ಕರಿಸಲು ಬರುವುದಿಲ್ಲ. ಮೇಲ್ಮನವಿದಾರರು ಅರ್ಜಿಗಳಿಗೆ ಪೂರಕವಾಗಿ ಸಲ್ಲಿಸಿರುವಂತಹ ಪ್ರಮಾಣ ಪತ್ರದಲ್ಲಿನ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ. ಮೇಲ್ಮನವಿದಾರರು ವಿಚಾರಣಾ ನ್ಯಾಯಾಲಯದಲ್ಲಿ ದಾಖಲಾತಿಗಳನ್ನು ಹಾಜರು ಪಡಿಸದೆ, ಸದರಿ ವಿಷಯವನ್ನು ಮರೆಮಾಚಿ, ದಾಖಲಾತಿಗಳನ್ನು ಪಡೆದುಕೊಳ್ಳದ ಕಾರಣ, ಈ ಹಂತದಲ್ಲಿ ಸದರಿ ದಾಖಲಾತಿಗಳ ಕುರಿತು ಹೆಚ್ಚುವರಿ ಸಾಕ್ಷ್ಯ ಮಾಡಿಸುವ ಅವಶ್ಯಕತೆ ಉಂಟಾಗುವುದಿಲ್ಲ. ಮೇಲ್ಮನವಿದಾರರು ಮತ್ತು 1 ನೇ ಎದುರುದಾರರು ಹಾಗೂ ಅವರ ವಾರಸುದಾರರ ಕುರಿತು ವಂಶವೃಕ್ಷದ ಪ್ರಕಾರ ಯಾವುದೇ ಸಂಬಂಧ ಇರುವುದಿಲ್ಲ. ಮೇಲ್ಮನವಿದಾರರಿಗೆ ದಾವಾ ಅನುಸೂಚಿತ ಸ್ವತ್ತುಗಳ ಕುರಿತು ಯಾವುದೇ ಹಕ್ಕು, ಅಧಿಕಾರ, ಹಿಸ್ಸೆ ಇರುವುದಿಲ್ಲ. ಮೇಲ್ಮನವಿದಾರರು ಕಾಲ ವಿಳಂಬ ವನ್ನುಂಟುಮಾಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿ ದಾರರು ಹಾಜರುಪಡಿಸಿರುವಂತಹ ದಾಖಲಾತಿಗಳಿಗೂ ಹಾಗೂ ದಾವಾ ಅನುಸೂಚಿತ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ. ಪ್ರಸ್ತುತ ಈ ಅರ್ಜಿಯನ್ನು

ಪುರಸ್ಕರಿಸಿದ್ದಲ್ಲಿ, ಎದುರುದಾರರಿಗೆ ತುಂಬಲಾರದ ಹಾನಿ ಉಂಟಾಗುತ್ತದೆ. 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚನ್ನಗಿರಿಯ ಅಸಲು ದಾವಾ ಸಂಖ್ಯೆ-116/2019 ರ ಪ್ರಕರಣಕ್ಕೂ ಮತ್ತು ಈ ಪ್ರಕರಣದ 1(ಎ) ಎದುರುದಾರರಿಗೂ ಯಾವುದೇ ಸಂಬಂಧ ಇರುವುದಿಲ್ಲ. ಹಾಗಾಗಿ ಮೇಲ್ಮನವಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-8 ಮತ್ತು 9 ನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

10. ಈ ಮೇಲ್ಕಂಡ ಮೇಲ್ಮನವಿಯಲ್ಲಿನ ಅಂಶಗಳನ್ನು ಹಾಗೂ ಮಧ್ಯಂತರ ಅರ್ಜಿಯಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿ, ಮೇಲ್ಮನವಿಯನ್ನು ತೀರ್ಮಾನಿಸ ಬೇಕಾದ ಅಂಶಗಳು ಈ ಕೆಳಗಿನಂತಿವೆ:-

1. ವಿಚಾರಣಾ ನ್ಯಾಯಾಲಯದ ವಾದಪತ್ರವನ್ನು, ಅಂಶಗಳನ್ನು, ಸಾಕ್ಷ್ಯವನ್ನು ಹಾಗೂ ತೀರ್ಪು ಮತ್ತು ಡಿಕ್ರಿಯನ್ನು ಪರಿಶೀಲಿಸಲಾಗಿ, ಮೇಲ್ಮನವಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 41 ನಿಯಮ 27 ಸಹವಾಚಕ 151 ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಗಳಲ್ಲಿ ಕೋರಿರುವಂತೆ, ಮೇಲ್ಮನವಿದಾರರ ಪರವಾಗಿ ಹೆಚ್ಚುವರಿ ಸಾಕ್ಷ್ಯ ಮಾಡಿಸಲು ಅವಕಾಶವನ್ನು ನೀಡುವ ಅಗತ್ಯತೆ ಇದೆ ಎಂದು ಕಂಡು ಬರುತ್ತದೆಯೆ ?
2. ವಿಚಾರಣಾ ನ್ಯಾಯಾಲಯದ ದಿನಾಂಕ 08.06.2020 ರ ಅಸಲು ದಾವಾ ಸಂಖ್ಯೆ-67/2018 ರ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ, ಎದುರುದಾರರಿಗೆ ಪ್ರತಿವಾದಪತ್ರ ಸಲ್ಲಿಸಲು ಮತ್ತು ಸಾಕ್ಷಿ ವಿಚಾರಣೆ ಮಾಡಿಸಲು ಅವಕಾಶವನ್ನು ನೀಡುವ ಸಲುವಾಗಿ, ವಿಚಾರಣಾ ನ್ಯಾಯಾಲಯಕ್ಕೆ ಮರು ವಿಚಾರಣೆಗಾಗಿ ಕಳುಹಿಸಬೇಕೆಂದು ಎದುರುದಾರರು ರುಜುವಾತುಪಡಿಸುವರೆ ?
3. ವಿಚಾರಣಾ ನ್ಯಾಯಾಲಯವು ದಿನಾಂಕ 08.06.2020 ರಂದು ಅಸಲು ದಾವಾ ಸಂಖ್ಯೆ-67/2018 ರಲ್ಲಿ ನೀಡಿರುವಂತಹ ತೀರ್ಪು

ಮತ್ತು ಡಿಕ್ರಿ ಕಾನೂನುಬದ್ಧವಾಗಿಲ್ಲ ಎಂಬುದನ್ನು ಮೇಲ್ಮನವಿ ದಾರರು ರುಜುವಾತುಪಡಿಸುವರೆ?

4. ವಿಚಾರಣಾ ನ್ಯಾಯಾಲಯದ ದಿನಾಂಕ 08.06.2020 ರಂದು ಅಸಲು ದಾವಾ ಸಂಖ್ಯೆ-67/2018 ರ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ, ವಿಚಾರಣಾ ನ್ಯಾಯಾಲಯಕ್ಕೆ ಮರು ವಿಚಾರಣೆಗಾಗಿ ಕಳುಹಿಸುವ ಅಗತ್ಯತೆ ಇದೆ ಎಂದು ಕಂಡುಬರುತ್ತದೆಯೆ?

5. ಯಾವ ಆದೇಶ?

11. ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಗಿನಂತೆ ಉತ್ತರಿಸುತ್ತಿದ್ದೇನೆಃ-

ಅಂಶ ಸಂಖ್ಯೆ-1 : ಸಕಾರಾತ್ಮಕವಾಗಿ,
ಅಂಶ ಸಂಖ್ಯೆ-2 : ಸಕಾರಾತ್ಮಕವಾಗಿ,
ಅಂಶ ಸಂಖ್ಯೆ-3 : ಸಕಾರಾತ್ಮಕವಾಗಿ,
ಅಂಶ ಸಂಖ್ಯೆ-4 : ಸಕಾರಾತ್ಮಕವಾಗಿ,
ಅಂಶ ಸಂಖ್ಯೆ-5 : ಅಂತಿಮ ಆದೇಶದಂತೆ.

## ಕಾ ರ ಣ ಗ ಳು

**12. ಅಂಶ ಸಂಖ್ಯೆ-1:-** ಪ್ರಸ್ತುತ ಈ ಮೇಲ್ಮನವಿಯನ್ನು, ಮೇಲ್ಮನವಿ ದಾರರು ಹೊಳಲ್ಕೆರೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿನ ಅಸಲು ದಾವಾ ಸಂಖ್ಯೆ-67/2018 ರ ದಿನಾಂಕ 08.06.2020 ರಂದು ನೀಡಿರುವಂತಹ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ, ಮೇಲ್ಮನವಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ. ವಿಚಾರಣಾ ನ್ಯಾಯಾಲಯದ ವಾದಪತ್ರ, ಅಂಶಗಳು, ವಾದಿಯರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯ ಮತ್ತು ತೀರ್ಪು ಹಾಗೂ ಡಿಕ್ರಿಯನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ವಾದಿಯರು ಪ್ರಸ್ತುತ ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಅನುಸೂಚಿತ ಸ್ವತ್ತುಗಳ

ಕುರಿತಾಗಿ ತಮ್ಮ ಪಾಲಿನ ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನತೆಯ ಪರಿಹಾರವನ್ನು ಕೋರಿರುವುದು ಕಂಡುಬರುತ್ತದೆ. ವಿಚಾರಣಾ ನ್ಯಾಯಾಲಯವು ಅಂಶ ಸಂಖ್ಯೆ-1 ರ ಕುರಿತಾಗಿ ದಾವಾ ಅನುಸೂಚಿತ ಸ್ವತ್ತು ವಾದಿಯರು ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತ ಸ್ವತ್ತು ಎಂದು ಸಕಾರಾತ್ಮಕವಾಗಿ ನಿರ್ಣಯಿಸಿರುತ್ತದೆ. ಅಂಶ ಸಂಖ್ಯೆ-2 ರಂತೆ ವಾದಿಯರು ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರಾಗಿದ್ದು, ಹಾಗಾಗಿ ದಾವಾ ಸ್ವತ್ತಿನ ಕುರಿತು ತಲಾ 1/4 ನೇ ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನತೆಯ ಕುರಿತು ಸಕಾರಾತ್ಮಕವೆಂದು ನಿರ್ಣಯಿಸಿರುತ್ತದೆ. ಪ್ರಸ್ತುತ ಮೇಲ್ಮನವಿ ದಾರರು ಮಧ್ಯಂತರ ಅರ್ಜಿಗಳೊಂದಿಗೆ ದಾಖಲಾತಿಗಳನ್ನು ಸಲ್ಲಿಸಿ, ಮೇಲ್ಮನವಿದಾರರ ಪರವಾಗಿ ಹೆಚ್ಚುವರಿ ಸಾಕ್ಷ್ಯ ಮಾಡಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಮಧ್ಯಂತರ ಅರ್ಜಿಗಳೊಂದಿಗೆ ವಡೇನಹಳ್ಳಿ ಗ್ರಾಮದ ಎಂ.ಆರ್. ಹೆಚ್.7/2022-23 ರ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ನಾಗೇಂದ್ರಪ್ಪ ಬಿನ್ ಸೀನಪ್ಪರವರ ಹೆಸರಿನಿಂದ ಪೌತಿ ಮೇರೆಗೆ ಗಂಗಮ್ಮ ಕೋಂ ಲೇಟ್ ನಾಗೇಂದ್ರಪ್ಪರವರ ಹೆಸರಿಗೆ 4 ಎಕರೆ ವಿಸ್ತೀರ್ಣದ ಕುರಿತು ಖಾತೆ ಏರ್ಪಟ್ಟಿರುವುದು ಕಂಡುಬರುತ್ತದೆ. ವಡೇನಹಳ್ಳಿ ಗ್ರಾಮದ ಸರ್ವೆ ನಂ.6/5 ರ 2024-25 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಂತೆ ಸದರಿ ಸ್ವತ್ತಿನ ಖಾತೆಯು ಗಂಗಮ್ಮ ಕೋಂ ಲೇಟ್ ನಾಗೇಂದ್ರಪ್ಪ ಮತ್ತು ಗಂಗಮ್ಮ ಬಿನ್ ತಿಮ್ಮಕ್ಕರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ಲಕ್ಷ್ಮೀಸಾಗರ ಗ್ರಾಮದ ಎಂ.ಆರ್.ಹೆಚ್-3/2012-13 ರ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ಸರ್ವೆ ನಂ.29/1 ಪಿ2 ರ 4 ಎಕರೆ 19 ಗುಂಟೆ ಸ್ವತ್ತಿನ ಖಾತೆಯು ಮೂಡ್ಲಪ್ಪ ಬಿನ್ ತಿಮ್ಮಣ್ಣರವರ ಹೆಸರಿನಿಂದ ಪೌತಿ ಮೇರೆಗೆ, ಗಂಗಮ್ಮ ಕೋಂ ಮೂಡ್ಲಪ್ಪ ಮತ್ತು ತಿಪ್ಪೇಶಪ್ಪ ಬಿನ್ ಮೂಡ್ಲಪ್ಪರವರ ಹೆಸರಿಗೆ ಏರ್ಪಟ್ಟಿರುವುದು ಕಂಡುಬರುತ್ತದೆ. ಲಕ್ಷ್ಮೀಸಾಗರ ಗ್ರಾಮದ ಸರ್ವೆ ನಂ.29/1 ಪಿ2 ರ 2010-11 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಂತೆ ಎಂ.ಆರ್. ಸಂಖ್ಯೆ-22/1966-67 ರ ಕ್ರಯದಂತೆ ಸದರಿ ಸ್ವತ್ತಿನ ಖಾತೆಯು ಮೂಡ್ಲಪ್ಪ ಬಿನ್ ತಿಮ್ಮಣ್ಣರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ದಿನಾಂಕ 21.12.1966 ರ ನೋಂದಣಿ ಕ್ರಯ ಪತ್ರದ ದೃಡೀಕೃತ

ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ಚನ್ನಗಿರಿ ತಾಲ್ಲೂಕು, ಸಂತೇಬೆನ್ನೂರು ಹೋಬಳಿ, ಅರಳಿಕಟ್ಟೆ ಗ್ರಾಮದ ವಾಸಿಯಾದ ಚನ್ನಾಚಾರ್ಯರವರ ಮಕ್ಕಳಾದ ಸಿದ್ದಾಚಾರ್ಯರವರಿಗೆ ಲಕ್ಷ್ಮೀಸಾಗರ ಗ್ರಾಮದ ವಾಸಿಗಳಾದ ವಡ್ಡರ ಪೂಜಾರಿ ತಿಮ್ಮಣ್ಣನ ಮಕ್ಕಳಾದ ತಿಮ್ಮಣ್ಣ ಯಾನೆ ಗಿಡ್ಡಪ್ಪ ಮತ್ತು ಮೂಡ್ಲಪ್ಪರವರು ಸೇರಿಕೊಂಡು, ಚನ್ನಗಿರಿ ತಾಲ್ಲೂಕಿನ ಲಕ್ಷ್ಮೀಸಾಗರ ಗ್ರಾಮದ ಹಾಲಿ ತಮ್ಮ ಹೆಸರಿನಲ್ಲಿರುವ ಸರ್ವೇ ನಂ.29/1 ರ 6 ಎಕರೆ 19 ಗುಂಟೆ ಪೈಕಿ, ಪಶ್ಚಿಮ ಭಾಗದ 2 ಎಕರೆ ಸ್ವತ್ತನ್ನು ಪೂರ್ವಕ್ಕೆ-ಇದೇ ನಂಬರಿನ ಪೈಕಿ ನಾವು ಎರಡು ಜನ ಉಳಿಸಿಕೊಂಡಿರುವ ಸ್ವತ್ತು, ಪಶ್ಚಿಮಕ್ಕೆ-ಕೊರಟಿಗೆರೆ ಹೊನ್ನೆಬಾಗಿ ಮಹಾದೇವಪ್ಪರವರ ಮಗ ತಿಮ್ಮಣ್ಣರವರ ಜಮೀನು, ದಕ್ಷಿಣಕ್ಕೆ-ಕೊರಟಿಗೆರೆ ಪುಟ್ಟಜ್ಜಿ ಶಿವಲಿಂಗಪ್ಪರವರ ಜಮೀನು ಮತ್ತು ಉತ್ತರಕ್ಕೆ-ಲಕ್ಷ್ಮೀಸಾಗರದ ತಿಮ್ಮಪ್ಪ ಮತ್ತು ಹನಮಂತಪ್ಪನ ಜಮೀನು ಎಂಬ ಚಕ್ಕುಬಂದಿಗೊಳಪಟ್ಟಂತೆ ಕ್ರಯಕ್ಕೆ ನೀಡಿರುವುದು ಕಂಡುಬರುತ್ತದೆ. ದಿನಾಂಕ 28.04.1979 ರ ವ್ಯವಸ್ಥಾಪನಾ ಪತ್ರದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ಚನ್ನಗಿರಿ ತಾಲ್ಲೂಕು, ಸಂತೇಬೆನ್ನೂರು ಹೋಬಳಿ, ಲಕ್ಷ್ಮೀಸಾಗರ ಗ್ರಾಮದ ವಾಸಿಯಾದ ಬೋವಿ ಜನಾಂಗದ ಸೀನಪ್ಪರವರ ಮಗ ನಾಗೇಂದ್ರಪ್ಪ ಮತ್ತು ಹೊಳಲ್ಕೆರೆ ತಾಲ್ಲೂಕು, ತಾಳ್ಯ ಹೋಬಳಿ, ಕಾಶಿಪುರ ಗ್ರಾಮದ ವಾಸಿಯಾದ ಮೂಡ್ಲಪ್ಪನ ಮಗಳಾದ ತಿಮ್ಮಕ್ಕನ ಮಗಳು ಹಾಗೂ ತನ್ನ ಸೊಸೆಯಾದ ಗಂಗಮ್ಮರವರಿಗೆ ಲಕ್ಷ್ಮೀಸಾಗರ ಗ್ರಾಮದ ವಾಸಿಯಾದ ದಾಸಪ್ಪರವರ ಮಗನಾದ 75 ವರ್ಷ ವಯಸ್ಸಿನ ತಿಮ್ಮಪ್ಪ ಆದ ನಾನು, ವಡೇರಹಳ್ಳಿ ಗ್ರಾಮದ ತನ್ನ ಹೆಸರಿನಲ್ಲಿರುವಂತಹ ಸರ್ವೇ ನಂ.6/2 ರ 14 ಎಕರೆ 30 ಗುಂಟೆ ಪೈಕಿ ಪೂರ್ವ ಭಾಗದ 4 ಎಕರೆ ಸ್ವತ್ತನ್ನು ಪೂರ್ವಕ್ಕೆ-ಅರೇಹಳ್ಳಪ್ಪರವರ ಜಮೀನು, ಪಶ್ಚಿಮಕ್ಕೆ-ಇದೇ ನಂಬರಿನ ಪೈಕಿ ನಾನು ಉಳಿಸಿಕೊಂಡಿರುವ ಜಮೀನು, ಉತ್ತರಕ್ಕೆ-ಕಾಮನಹಳ್ಳಿ ದ್ಯಾಮಣ್ಣರವರ ಜಮೀನು ಮತ್ತು ದಕ್ಷಿಣಕ್ಕೆ-ಚಿಕ್ಕನಕಟ್ಟೆ ಕುಂಟಬಸಪ್ಪರವರ ಜಮೀನು ಎಂಬ ಚಕ್ಕುಬಂದಿಗೊಳ ಪಟ್ಟಂತೆ ವ್ಯವಸ್ಥಾಪನಾ ಪತ್ರವನ್ನು ಜಾರಿಮಾಡಿಕೊಟ್ಟಿರುವುದು ಕಂಡುಬರುತ್ತದೆ. ಲಕ್ಷ್ಮೀಸಾಗರ ಗ್ರಾಮದ ಎಂ.ಆರ್.22/1966-67 ರ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು, ತಿಮ್ಮಣ್ಣ ಯಾನೆ ಪೂಜಾರಿ ವಡ್ಡರ ತಿಮ್ಮಣ್ಣ, ಲಕ್ಷ್ಮೀಸಾಗರರವರಿಂದ ಸಿದ್ದಾಚಾರಿ ಬಿನ್ ಅರ್ಕಾಚಾರಿ ಚನ್ನಾಚಾರ್ಯ, ಅರಳಿಕಟ್ಟೆ

ರವರಿಗೆ ಸರ್ವೇ ನಂ.29/1 ರ 6 ಎಕರೆ 19 ಗುಂಟೆ ಪೈಕಿ ಪಶ್ಚಿಮ ಭಾಗದ ಸ್ವತ್ತನ್ನು ಕ್ರಯಕ್ಕೆ ಮಾಡಿಕೊಟ್ಟಿರುವ ಕುರಿತು ಉಲ್ಲೇಖ ಇರುತ್ತದೆ. 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚನ್ನಗಿರಿರವರ ಅಸಲು ದಾವಾ ಸಂಖ್ಯೆ-116/2019 ರ ತೀರ್ಪು ಮತ್ತು ಡಿಕ್ರಿಯ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ಲಕ್ಷ್ಮೀಸಾಗರ ಗ್ರಾಮದ ಸರ್ವೇ ನಂ.29/1 ಪಿ2 ರ 4 ಎಕರೆ 19 ಗುಂಟೆ ಸ್ವತ್ತಿನ ಕುರಿತು ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನತೆಯ ಬಗ್ಗೆ ಡಿಕ್ರಿ ಪಡೆದಿರುವುದು ಕಂಡುಬರುತ್ತದೆ. ಹಾಗಾಗಿ ಸದರಿ ದಾಖಲಾತಿಗಳ ಕುರಿತು ಮೇಲ್ಮನವಿ ದಾರರ ಪರವಾಗಿ ಹೆಚ್ಚುವರಿ ಸಾಕ್ಷ್ಯ ಮಾಡಿಸಲು ಅನುಮತಿ ನೀಡುವಂತೆ ಕೋರಿರುವ ಪರಿಹಾರವನ್ನು ಪರಿಗಣಿಸುವ ಅಗತ್ಯತೆ ಇದೆ ಎಂದು ಕಂಡುಬರುತ್ತದೆ.

13. ಪ್ರಸ್ತುತ ಈ ಮೇಲ್ಮನವಿಯ ಮೇಲ್ಮನವಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 41 ನಿಯಮ 27 ಸಹವಾಚಕ 151 ರ ಅಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ-8 ಮತ್ತು 9 ನ್ನು ಸಲ್ಲಿಸಿ, ಮೇಲ್ಮನವಿದಾರರಾದ ವಾದಿಯರ ಪರವಾಗಿ ಅರ್ಜಿಯಲ್ಲಿ ನಮೂದಿಸಿರುವಂತಹ ದಾಖಲಾತಿಗಳ ಕುರಿತಾಗಿ ಹೆಚ್ಚುವರಿ ಸಾಕ್ಷ್ಯವನ್ನು ಮಾಡಿಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಸದರಿ ಅರ್ಜಿಗಳಿಗೆ ಪೂರಕವಾಗಿ ಸಲ್ಲಿಸಿರುವ ಪ್ರಮಾಣ ಪತ್ರವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಅರ್ಜಿಗೆ ಪೂರಕವಾಗಿ ಹಾಜರುಪಡಿಸಿರುವಂತಹ ದಾಖಲಾತಿಗಳು ವಾದಿಯರ ನಿಲುವುಗಳ ಕುರಿತು ಸಾಬೀತುಪಡಿಸಲು ಅತ್ಯಂತ ಅಗತ್ಯವಾದ ದಾಖಲಾತಿಗಳಾಗಿದ್ದು, ಸದರಿ ದಾಖಲಾತಿಗಳನ್ನು ಹಾಜರುಪಡಿಸಲು ಮತ್ತು ಸದರಿ ದಾಖಲಾತಿಗಳ ಕುರಿತು ವಾದಿಯರ ಪರ ಹೆಚ್ಚುವರಿ ಸಾಕ್ಷ್ಯ ಮಾಡಿಸಲು ಅನುವು ಮಾಡಿಕೊಡಬೇಕೆಂದು ಕೋರಿರುತ್ತಾರೆ. ಅರ್ಜಿಗೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ವಡೇನಹಳ್ಳಿ ಗ್ರಾಮದ ಎಂ.ಆರ್.ಹೆಚ್.7/2022-23 ರ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ನಾಗೇಂದ್ರಪ್ಪ ಬಿನ್ ಸೀನಪ್ಪ ರವರ ಹೆಸರಿನಿಂದ ಪೌತಿ ಮೇರೆಗೆ ಗಂಗಮ್ಮ ಕೋಂ ಲೇಟ್ ನಾಗೇಂದ್ರಪ್ಪರವರ ಹೆಸರಿಗೆ 4 ಎಕರೆ ವಿಸ್ತೀರ್ಣದ ಕುರಿತು ಖಾತೆ ಏರ್ಪಟ್ಟಿರುವುದು ಕಂಡುಬರುತ್ತದೆ.

ವಡೇನಹಳ್ಳಿ ಗ್ರಾಮದ ಸರ್ವೇ ನಂ.6/5 ರ 2024-25 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಂತೆ ಸದರಿ ಸ್ವತ್ತಿನ ಖಾತೆಯು ಗಂಗಮ್ಮ ಕೋಂ ಲೇಟ್ ನಾಗೇಂದ್ರಪ್ಪ ಮತ್ತು ಗಂಗಮ್ಮ ಬಿನ್ ತಿಮ್ಮಕ್ಕರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ಲಕ್ಷ್ಮೀಸಾಗರ ಗ್ರಾಮದ ಎಂ.ಆರ್.ಹೆಚ್-3/2012-13 ರ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ಸರ್ವೇ ನಂ.29/1 ಪಿ2 ರ 4 ಎಕರೆ 19 ಗುಂಟೆ ಸ್ವತ್ತಿನ ಖಾತೆಯು ಮೂಡ್ಲಪ್ಪ ಬಿನ್ ತಿಮ್ಮಣ್ಣರವರ ಹೆಸರಿನಿಂದ ಪೌತಿ ಮೇರೆಗೆ, ಗಂಗಮ್ಮ ಕೋಂ ಮೂಡ್ಲಪ್ಪ ಮತ್ತು ತಿಪ್ಪೇಶಪ್ಪ ಬಿನ್ ಮೂಡ್ಲಪ್ಪರವರ ಹೆಸರಿಗೆ ಏರ್ಪಟ್ಟಿರುವುದು ಕಂಡುಬರುತ್ತದೆ. ಲಕ್ಷ್ಮೀಸಾಗರ ಗ್ರಾಮದ ಸರ್ವೇ ನಂ.29/1 ಪಿ2 ರ 2010-11 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಂತೆ ಎಂ.ಆರ್. ಸಂಖ್ಯೆ-22/1966-67 ರ ಕ್ರಯದಂತೆ ಸದರಿ ಸ್ವತ್ತಿನ ಖಾತೆಯು ಮೂಡ್ಲಪ್ಪ ಬಿನ್ ತಿಮ್ಮಣ್ಣರವರ ಹೆಸರಿನಲ್ಲಿ ನಮೂದು ಇರುವುದು ಕಂಡುಬರುತ್ತದೆ. ದಿನಾಂಕ 21.12.1966 ರ ನೋಂದಣಿ ಕ್ರಯ ಪತ್ರದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ಚನ್ನಗಿರಿ ತಾಲ್ಲೂಕು, ಸಂತೇಬೆನ್ನೂರು ಹೋಬಳಿ, ಅರಳಿಕಟ್ಟೆ ಗ್ರಾಮದ ವಾಸಿಯಾದ ಚನ್ನಾಚಾರ್ಯರವರ ಮಕ್ಕಳಾದ ಸಿದ್ದಾಚಾರ್ಯರವರಿಗೆ ಲಕ್ಷ್ಮೀಸಾಗರ ಗ್ರಾಮದ ವಾಸಿಗಳಾದ ವಡ್ಡರ ಪೂಜಾರಿ ತಿಮ್ಮಣ್ಣನ ಮಕ್ಕಳಾದ ತಿಮ್ಮಣ್ಣ ಯಾನೆ ಗಿಡ್ಡಪ್ಪ ಮತ್ತು ಮೂಡ್ಲಪ್ಪರವರು ಸೇರಿಕೊಂಡು, ಚನ್ನಗಿರಿ ತಾಲ್ಲೂಕಿನ ಲಕ್ಷ್ಮೀಸಾಗರ ಗ್ರಾಮದ ಹಾಲಿ ತಮ್ಮ ಹೆಸರಿನಲ್ಲಿರುವ ಸರ್ವೇ ನಂ.29/1 ರ 6 ಎಕರೆ 19 ಗುಂಟೆ ಪೈಕಿ, ಪಶ್ಚಿಮ ಭಾಗದ 2 ಎಕರೆ ಸ್ವತ್ತನ್ನು ಪೂರ್ವಕ್ಕೆ-ಇದೇ ನಂಬರಿನ ಪೈಕಿ ನಾವು ಎರಡು ಜನ ಉಳಿಸಿಕೊಂಡಿರುವ ಸ್ವತ್ತು, ಪಶ್ಚಿಮಕ್ಕೆ-ಕೊರಟಿಗೆರೆ ಹೊನ್ನೆಬಾಗಿ ಮಹಾದೇವಪ್ಪರವರ ಮಗ ತಿಮ್ಮಣ್ಣರವರ ಜಮೀನು, ದಕ್ಷಿಣಕ್ಕೆ-ಕೊರಟಿಗೆರೆ ಪುಟ್ಟಜ್ಜಿ ಶಿವಲಿಂಗಪ್ಪರವರ ಜಮೀನು ಮತ್ತು ಉತ್ತರಕ್ಕೆ-ಲಕ್ಷ್ಮೀಸಾಗರದ ತಿಮ್ಮಪ್ಪ ಮತ್ತು ಹನಮಂತಪ್ಪನ ಜಮೀನು ಎಂಬ ಚಕ್ಕುಬಂದಿಗೊಳಪಟ್ಟಂತೆ ಕ್ರಯಕ್ಕೆ ನೀಡಿರುವುದು ಕಂಡುಬರುತ್ತದೆ. ದಿನಾಂಕ 28.04.1979 ರ ವ್ಯವಸ್ಥಾಪನಾ ಪತ್ರದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ಚನ್ನಗಿರಿ ತಾಲ್ಲೂಕು, ಸಂತೇಬೆನ್ನೂರು ಹೋಬಳಿ, ಲಕ್ಷ್ಮೀಸಾಗರ ಗ್ರಾಮದ ವಾಸಿಯಾದ ಬೋವಿ ಜನಾಂಗದ

ಸೀನಪ್ಪರವರ ಮಗ ನಾಗೇಂದ್ರಪ್ಪ ಮತ್ತು ಹೊಳಲ್ಕೆರೆ ತಾಲ್ಲೂಕು, ತಾಳ್ಯ ಹೋಬಳಿ, ಕಾಶಿಪುರ ಗ್ರಾಮದ ವಾಸಿಯಾದ ಮೂಡ್ಲಪ್ಪನ ಮಗಳಾದ ತಿಮ್ಮಕ್ಕನ ಮಗಳು ಹಾಗೂ ತನ್ನ ಸೊಸೆಯಾದ ಗಂಗಮ್ಮರವರಿಗೆ ಲಕ್ಷ್ಮೀಸಾಗರ ಗ್ರಾಮದ ವಾಸಿಯಾದ ದಾಸಪ್ಪರವರ ಮಗನಾದ 75 ವರ್ಷ ವಯಸ್ಸಿನ ತಿಮ್ಮಪ್ಪ ಆದ ನಾನು, ವಡೇರಹಳ್ಳಿ ಗ್ರಾಮದ ತನ್ನ ಹೆಸರಿನಲ್ಲಿರುವಂತಹ ಸರ್ವೇ ನಂ.6/2 ರ 14 ಎಕರೆ 30 ಗುಂಟೆ ಪೈಕಿ ಪೂರ್ವ ಭಾಗದ 4 ಎಕರೆ ಸ್ವತ್ತನ್ನು ಪೂರ್ವಕ್ಕೆ-ಅರೇಹಳ್ಳಪ್ಪರವರ ಜಮೀನು, ಪಶ್ಚಿಮಕ್ಕೆ-ಇದೇ ನಂಬರಿನ ಪೈಕಿ ನಾನು ಉಳಿಸಿಕೊಂಡಿರುವ ಜಮೀನು, ಉತ್ತರಕ್ಕೆ-ಕಾಮನಹಳ್ಳಿ ದ್ಯಾಮಣ್ಣರವರ ಜಮೀನು ಮತ್ತು ದಕ್ಷಿಣಕ್ಕೆ-ಚಿಕ್ಕನಕಟ್ಟೆ ಕುಂಟಬಸಪ್ಪರವರ ಜಮೀನು ಎಂಬ ಚಕ್ಕುಬಂದಿಗೊಳಪಟ್ಟಂತೆ ವ್ಯವಸ್ಥಾಪನಾ ಪತ್ರವನ್ನು ಜಾರಿಮಾಡಿಕೊಟ್ಟಿರುವುದು ಕಂಡುಬರುತ್ತದೆ. ಲಕ್ಷ್ಮೀಸಾಗರ ಗ್ರಾಮದ ಎಂ.ಆರ್.22/1966-67 ರ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ತಿಮ್ಮಣ್ಣ ಯಾನೆ ಪೂಜಾರಿ ವಡ್ಡರ ತಿಮ್ಮಣ್ಣ, ಲಕ್ಷ್ಮೀಸಾಗರರವರಿಂದ ಸಿದ್ದಾಚಾರಿ ಬಿನ್ ಅರ್ಕಾಚಾರಿ ಚನ್ನಾಚಾರ್ಯ, ಅರಳಿಕಟ್ಟೆರವರಿಗೆ ಸರ್ವೇ ನಂ.29/1 ರ 6 ಎಕರೆ 19 ಗುಂಟೆ ಪೈಕಿ ಪಶ್ಚಿಮ ಭಾಗದ ಸ್ವತ್ತನ್ನು ಕ್ರಯಕ್ಕೆ ಮಾಡಿಕೊಟ್ಟಿರುವ ಕುರಿತು ಉಲ್ಲೇಖ ಇರುತ್ತದೆ. 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚನ್ನಗಿರಿರವರ ಅಸಲು ದಾವಾ ಸಂಖ್ಯೆ-116/2019 ರ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ಲಕ್ಷ್ಮೀಸಾಗರ ಗ್ರಾಮದ ಸರ್ವೇ ನಂ.29/1 ಪಿ2 ರ 4 ಎಕರೆ 19 ಗುಂಟೆ ಸ್ವತ್ತಿನ ಕುರಿತು ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನತೆಯ ಬಗ್ಗೆ ಡಿಕ್ರಿ ಪಡೆದಿರುವುದು ಕಂಡುಬರುತ್ತದೆ. ಈ ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಸದರಿ ದಾಖಲಾತಿಗಳು ಈ ದಾವೆಯ ವಿವಾದಾಂಶಗಳ ನಿರ್ಣಯಕ್ಕೆ ಅಗತ್ಯತೆ ಇದೆ ಎಂದು ಕಂಡುಬರುತ್ತದೆ. ಹಾಗಾಗಿ ಸದರಿ ದಾಖಲಾತಿಗಳನ್ನು ಹಾಜರುಪಡಿಸಲು ಹಾಗೂ ಸದರಿ ದಾಖಲಾತಿಗಳ ಕುರಿತು ವಾದಿಯರ ಪರವಾಗಿ ಹೆಚ್ಚುವರಿ ಸಾಕ್ಷ್ಯ ಮಾಡಿಸಲು ಅವಕಾಶ ನೀಡುವುದು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಅಗತ್ಯತೆ ಇದೆ ಎಂದು ಕಂಡುಬರುತ್ತದೆ. ಹಾಗಾಗಿ ಮೇಲ್ಮನವಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 41 ನಿಯಮ 27 ರ

ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-8 ಮತ್ತು 9ನ್ನು ಪುರಸ್ಕರಿಸ ಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

14. ಈ ಮೇಲ್ಕಂಡ ಚರ್ಚೆಯಿಂದಾಗಿ ದಾವಾ ಅನುಸೂಚಿತ ಸ್ವತ್ತಿನ ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನತೆಯ ಕುರಿತು ವಾದಿಯರು ಮತ್ತು ಪ್ರತಿವಾದಿಯರ ನಡುವೆ ವಿವಾದವಿದ್ದು, ಸದರಿ ವಿವಾದದ ಕುರಿತು ನಿರ್ಣಯವನ್ನು ನೀಡುವ ಸಲುವಾಗಿ, ಉಭ ಯಪಕ್ಷಗಾರರಿಗೆ ನೈಸರ್ಗಿಕ ನಿಯಮಕ್ಕೆ ಅನುಸಾರವಾಗಿ ಅವಕಾಶವನ್ನು ನೀಡುವುದು ಅಗತ್ಯತೆ ಇದೆ ಎಂದು ಕಂಡುಬರುತ್ತದೆ. ಹಾಗಾಗಿ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಉಭಯ ಪಕ್ಷಗಾರರ ನಿಲುವುಗಳನ್ನು ಸಾಬೀತುಪಡಿಸುವ ಸಲುವಾಗಿ, ಮೇಲ್ಮನವಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸುವ ಅಗತ್ಯತೆ ಇದೆ ಎಂದು ಕಂಡು ಬರುತ್ತದೆ. ಆದಾಗ್ಯೂ ಮೇಲ್ಮನವಿದಾರರು ಮಧ್ಯಂತರ ಅರ್ಜಿಗಳೊಂದಿಗೆ ಸಲ್ಲಿಸಿರುವ ದಾಖಲಾತಿಗಳ ಕುರಿತು ವಿಚಾರಣಾ ನ್ಯಾಯಾಲಯದಲ್ಲಿ ಹಾಜರುಪಡಿಸದೆ, ದಾವೆಯನ್ನು ಸಲ್ಲಿಸಿದ 08 ವರ್ಷಗಳ ನಂತರದಲ್ಲಿ, ಈ ಮೇಲ್ಮನವಿಯಲ್ಲಿ ಮಧ್ಯಂತರ ಅರ್ಜಿಗಳೊಂದಿಗೆ ದಾಖಲಾತಿಗಳನ್ನು ಹಾಜರುಪಡಿಸಿ ರುವುದು ಕಂಡುಬರುತ್ತದೆ. ಹಾಗಾಗಿ ಸದರಿ ವಿಳಂಬದ ಕಾರಣಕ್ಕಾಗಿ ಮೇಲ್ಮನವಿ ದಾರರು ಎದುರುದಾರರಿಗೆ ರೂ.5,000/- ಖರ್ಚನ್ನು ಪಾವತಿಸುವಂತೆ ಸೂಚಿಸ ಲಾಗಿದೆ. ಹಾಗಾಗಿ ಈ ಮೇಲ್ಕಂಡ ನಿಬಂಧನೆಗೊಳಪಟ್ಟು ಮೇಲ್ಮನವಿದಾರರು ಸಲ್ಲಿಸಿರುವಂತಹ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಆದ್ದರಿಂದ ಈ ಮೇಲ್ಕಂಡ ಅಂಶ ಸಂಖ್ಯೆ-1ನ್ನು ಸಕಾರಾತ್ಮಕವೆಂದು ನಿರ್ಣಯಿಸಲಾಗಿದೆ.

**15. ಅಂಶ ಸಂಖ್ಯೆ-2 ರಿಂದ 4:-** ಈ ಮೂರು ಅಂಶಗಳ ಕುರಿತಾಗಿ ರುಜುವಾತುಪಡಿಸುವಂತಹ ಹೊಣೆಗಾರಿಕೆ ಮೇಲ್ಮನವಿದಾರರದ್ದಾಗಿದ್ದು, ಈ ಕುರಿತು ಪ್ರಾರಂಭಿಕ ಹಂತದಲ್ಲಿ ಮೇಲ್ಮನವಿದಾರರು ಸಲ್ಲಿಸಿರುವ ಮೇಲ್ಮನವಿಯನ್ನು ಹಾಗೂ ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಹಾಗೂ ಆದೇಶ ಪುಟವನ್ನು

ಕೂಲಂಕುಷವಾಗಿ ಪರಿಶೀಲಿಸಲಾಗುತ್ತದೆ. ಪ್ರಸ್ತುತ ಈ ಮೇಲ್ಮನವಿಯಲ್ಲಿ ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ, ಅಸಲು ದಾವಾ ಸಂಖ್ಯೆ-67/2018 ರ ಕುರಿತಾಗಿ ಡಿಕ್ರಿ ಮಾಡಬೇಕೆಂದು ಕೋರಿರುತ್ತಾರೆ. ಹಾಗಾಗಿ ಪ್ರಾರಂಭಿಕ ಹಂತದಲ್ಲಿ ಅಸಲು ದಾವಾ ಸಂಖ್ಯೆ-67/2018 ರ ಆದೇಶ ಪುಟದ ಕುರಿತು ಪರಿಶೀಲಿಸಲಾಗುತ್ತದೆ. ವಾದಿಯರು ಸಲ್ಲಿಸಿದ್ದ ದಾವೆಯ ಕುರಿತಾಗಿ ಪ್ರತಿವಾದಿಯರಿಗೆ ದಾವಾ ಸಮನ್ಸ್ ಜಾರಿಗೊಳಿಸಿದ್ದು, ದಿನಾಂಕ 28.06.2018 ಮತ್ತು 29.02.2020 ರಂದು ಪ್ರತಿವಾದಿಯರಿಗೆ ದಾವಾ ಸಮನ್ಸ್ ಜಾರಿಯಾಗಿದ್ದು, ಅದರಂತೆ ಸದರಿರವರನ್ನು ಏಕತರ್ಪಿಯ ಎಂದು ಆದೇಶಿಸಿರುವುದು ಕಂಡುಬರುತ್ತದೆ. ಆನಂತರದಲ್ಲಿ ವಾದಿಯರು ಪರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಪರಿಗಣಿಸಿ, ವಿಚಾರಣಾ ನ್ಯಾಯಾಲಯವು ವಾದಿಯರು ಸಲ್ಲಿಸಿರುವ ದಾವೆಯನ್ನು ಭಾಗಶಃ ಡಿಕ್ರಿ ಮಾಡಿರುವುದು ಕಂಡುಬರುತ್ತದೆ. ಮೇಲ್ಮನವಿದಾರರು ಮಧ್ಯಂತರ ಅರ್ಜಿಗಳೊಂದಿಗೆ ಸಲ್ಲಿಸಿರುವಂತಹ ದಾಖಲಾತಿಗಳನ್ನು ಪರಿಶೀಲಿಸಲಾಗಿ, ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ, ಸದರಿ ದಾಖಲಾತಿಗಳ ಕುರಿತಾಗಿ ಪುನಃ ನಿರ್ಣಯವನ್ನು ನೀಡುವ ಅಗತ್ಯತೆ ಇದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

16. ಈ ಮೇಲ್ಕಂಡಂತೆ ವಿಚಾರಣಾ ನ್ಯಾಯಾಲಯವು ಭಾಗಶಃ ಡಿಕ್ರಿ ಮಾಡಿದ ಕುರಿತಾಗಿ ವಾದಿಯರು ಪ್ರಸ್ತುತ ಈ ಮೇಲ್ಮನವಿಯನ್ನು ಸಲ್ಲಿಸಿದ್ದು, ಮೇಲ್ಮನವಿಯ ಹಂತದಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ-8 ಮತ್ತು 9 ನ್ನು ಸಲ್ಲಿಸಿ, ಸದರಿ ಅರ್ಜಿಗಳೊಂದಿಗೆ ಸಲ್ಲಿಸಿರುವ ದಾಖಲಾತಿಗಳ ಕುರಿತಾಗಿ ಹೆಚ್ಚುವರಿ ಸಾಕ್ಷ್ಯ ಮಾಡಿಸಲು ಅನುವು ಮಾಡಿಕೊಡಬೇಕೆಂದು ಕೋರಿರುತ್ತಾರೆ. ಈಗಾಗಲೇ ಮೇಲ್ಕಂಡಂತೆ ಅಂಶ ಸಂಖ್ಯೆ-1 ರಂತೆ ಮೇಲ್ಮನವಿದಾರರು ಸಲ್ಲಿಸಿರುವಂತಹ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸಲಾಗಿದೆ. ಪ್ರಸ್ತುತ ಈ ಪ್ರಕರಣದ 1(ಎ) ಎದುರುದಾರರು ಸದರಿ ಮಧ್ಯಂತರ ಅರ್ಜಿಗಳಿಗೆ ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿ, ವಾದಿಯರು ಸಲ್ಲಿಸಿರುವ ದಾವೆಯ ಕುರಿತಾಗಿ ಪ್ರತಿವಾದಿಯರಿಗೆ ಪ್ರತಿವಾದ ಪತ್ರವನ್ನು ಸಲ್ಲಿಸುವ ಕುರಿತಾಗಿ ವಿಚಾರಣಾ ನ್ಯಾಯಾಲಯಕ್ಕೆ ಮರು

ವಿಚಾರಣೆಗಾಗಿ ಕಳುಹಿಸಿಕೊಡುವ ಅಗತ್ಯತೆ ಇದೆ ಎಂದು ಕಂಡುಬರುತ್ತದೆ. ಹಾಗಾಗಿ ಪ್ರತಿವಾದಿಯರಿಗೆ ಪ್ರತಿವಾದ ಪತ್ರವನ್ನು ಸಲ್ಲಿಸಲು ಅವಕಾಶವನ್ನು ನೀಡುವ ಸಲುವಾಗಿ ಈ ದಾವೆಯ ಕುರಿತು ಮರು ವಿಚಾರಣೆಗಾಗಿ ಕಳುಹಿಸಿಕೊಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಅಂತೆಯೆ ಮೇಲ್ಮನವಿದಾರರ ಪರವಾಗಿ ಹಾಜರು ಪಡಿಸಿರುವಂತಹ ದಾಖಲಾತಿಗಳ ಕುರಿತಾಗಿ ವಾದಿಯರ ಪರ ಮುಂದುವರೆದ ಸಾಕ್ಷ್ಯದ ಅಗತ್ಯತೆಗಾಗಿ ಹಾಗೂ ಸದರಿ ಸಾಕ್ಷಿದಾರರ ಪಾಟೀ ಸವಾಲಿನ ಅಗತ್ಯತೆಗಾಗಿ ಮರು ವಿಚಾರಣೆಗೆ ಕಳುಹಿಸಿಕೊಡುವುದು ಸೂಕ್ತ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

17. ಮೇಲ್ಮನವಿದಾರರು ಪ್ರಸ್ತುತ ಈ ಮೇಲ್ಮನವಿಯಲ್ಲಿ ವಿಚಾರಣಾ ನ್ಯಾಯಾಲಯದ ಅಸಲು ದಾವಾ ಸಂಖ್ಯೆ-67/2018 ರ ದಿನಾಂಕ 08.06.2020 ರ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ, ಮೇಲ್ಮನವಿದಾರರಿಗೆ ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಸೂಕ್ತ ಮತ್ತು ಅಗತ್ಯವಾದ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ಕೋರಿದ್ದು, ಹಾಗಾಗಿ ಮೇಲ್ಮನವಿದಾರರ ಪರವಾಗಿ ಮಧ್ಯಂತರ ಅರ್ಜಿಗಳೊಂದಿಗೆ ಸಲ್ಲಿಸಿರುವ ದಾಖಲಾತಿಗಳ ಕುರಿತು ಹೆಚ್ಚುವರಿ ಸಾಕ್ಷ್ಯ ಮಾಡಿಸಲು ಅನುಮತಿ ನೀಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಅಂತೆಯೆ ಎದುರುದಾರರಾದ ಪ್ರತಿವಾದಿಯರಿಗೆ ಪ್ರತಿವಾದಪತ್ರವನ್ನು ಸಲ್ಲಿಸಲು, ವಾದಿಯರು ಪರ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಲು ಮತ್ತು ಪ್ರತಿವಾದಿಯರ ಪರವಾಗಿ ಸಾಕ್ಷಿ ವಿಚಾರಣೆ ಮಾಡಿಸಲು ಅವಕಾಶವನ್ನು ನೀಡುವ ಸಲುವಾಗಿ, ವಿಚಾರಣಾ ನ್ಯಾಯಾಲಯಕ್ಕೆ ಮರು ವಿಚಾರಣೆಗಾಗಿ ಕಳುಹಿಸುವ ಅಗತ್ಯತೆ ಇದೆ ಎಂದು ಕಂಡುಬರುತ್ತದೆ. ಈ ಕುರಿತು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 41 ನಿಯಮ 23 ಮತ್ತು 23(ಎ) ಕುರಿತು ಪರಿಶೀಲಿಸಲಾಗುತ್ತದೆ. ಕ್ರಮಾದೇಶ 41 ನಿಯಮ 23 ರಂತೆ ಯಾವ ನ್ಯಾಯಾಲಯದ ಡಿಕ್ರಿಯ ಮೇಲೆ ಅಪೀಲನ್ನು ಮಾಡಲಾಗಿದೆಯೋ, ಆ ನ್ಯಾಯಾಲಯವು ಪ್ರಾರಂಭಿಕ ಅಂಶದ ಮೇಲೆ ದಾವೆಯನ್ನು ವಿಲೇ ಮಾಡಿರುವಲ್ಲಿ ಮತ್ತು ಮೇಲ್ಮನವಿಯಲ್ಲಿ ಡಿಕ್ರಿಯನ್ನು ವಿಪರ್ಯಾಯಗೊಳಿಸಲಾಗಿರುವಲ್ಲಿ, ಮೇಲ್ಮನವಿ ನ್ಯಾಯಾಲಯವು ತಾವು ಸೂಕ್ತವೆಂದು ಆಲೋಚಿಸಿದರೆ, ಆದೇಶದ ಮೂಲಕ ದಾವೆಯ

ಯಾವ ವಿವಾದಾಂಶವನ್ನು ಅಧಿವಿಚಾರಣೆ ಮಾಡಬೇಕು ಎಂಬ ಬಗ್ಗೆ ಹೆಚ್ಚಿನ ನಿರ್ದೇಶನವನ್ನು ಕೊಡಬಹುದು ಎಂದು ಮತ್ತು ತಮ್ಮ ತೀರ್ಪಿನ ಆದೇಶದ ಒಂದು ಪ್ರತಿಯನ್ನು ಕಳುಹಿಸತಕ್ಕದು ಎಂದು ಉಲ್ಲೇಖಿಸಿರುತ್ತದೆ. ಕ್ರಮಾದೇಶ 41 ನಿಯಮ 23(ಎ) ರಂತೆ ಯಾವ ನ್ಯಾಯಾಲಯವು ಡಿಕ್ರಿಯ ಮೇಲೆ ಮೇಲ್ಮನವಿ ಹೂಡಲಾಗಿದೆಯೋ, ಆ ನ್ಯಾಯಾಲಯವು ಪ್ರಾರಂಭಿಕ ಅಂಶದ ಮೇಲೆ ಹೊರತು, ಅನ್ಯತಾ ದಾವೆಯನ್ನು ವಿಲೇಮಾಡಿರುವಲ್ಲಿ ಮತ್ತು ಮೇಲ್ಮನವಿಯಲ್ಲಿ ಡಿಕ್ರಿಯನ್ನು ವಿಪರ್ಯಾಯ ಗೊಳಿಸಲಾಗಿರುವಲ್ಲಿ, ಪುನಃ ವಿಚಾರಣೆಯು ಅವಶ್ಯಕವೆಂದು ಪರ್ಯಾಲೋಚಿಸಿದ್ದಲ್ಲಿ, ಮೇಲ್ಮನವಿ ನ್ಯಾಯಾಲಯವು ನಿಯಮ 23ರ ಪ್ರಕಾರ ಕಾರ್ಯವನ್ನು ನಿರ್ವಹಿಸುವ ಕುರಿತು ಉಲ್ಲೇಖ ಇರುತ್ತದೆ.

18. ಈ ಮೇಲ್ಕಂಡ ಕಾನೂನಿನ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಮೇಲ್ಮನವಿ ನ್ಯಾಯಾಲಯವು ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿದ ನಂತರದಲ್ಲಿ, ಯಾವ ಮಾನದಂಡಗಳ ಆಧಾರದಲ್ಲಿ ವಿಚಾರಣಾ ನ್ಯಾಯಾಲಯದ ದಾವೆಯನ್ನು ಮರು ವಿಚಾರಣೆಗಾಗಿ ಒಪ್ಪಿಸಬಹುದು ಎಂಬುದರ ಕುರಿತು ಉಲ್ಲೇಖ ಇರುತ್ತದೆ. ಈ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಮೇಲ್ಮನವಿದಾರರು ಸಲ್ಲಿಸಿರುವ ಮೇಲ್ಮನವಿಯ ಕುರಿತು ಪರಿಶೀಲಿಸಲಾಗಿ, ವಿಚಾರಣಾ ನ್ಯಾಯಾಲಯವು ಅಸಲು ದಾವಾ ಸಂಖ್ಯೆ-67/2018ರ ದಿನಾಂಕ 08.06.2020 ರ ತೀರ್ಪು ಮತ್ತು ಡಿಕ್ರಿಯನ್ನು ನೀಡುವ ಕಾಲಕ್ಕೆ, ಪ್ರತಿವಾದಿಯರ ಪರವಾಗಿ ಪ್ರತಿವಾದ ಪತ್ರವನ್ನು ಸಲ್ಲಿಸದಿರುವುದು, ವಾದಿಯರ ಪರವಾಗಿ ಹಾಜರುಪಡಿಸಿರುವ ದಾಖಲಾತಿ ಗಳ ಕುರಿತು ಪಿ.ಡಬ್ಲ್ಯೂ-1ರವರನ್ನು ಪಾಟೀ ಸವಾಲು ಮಾಡದಿರುವುದು ಹಾಗೂ ಪ್ರತಿವಾದಿಯರ ಪರವಾಗಿ ಸಾಕ್ಷ್ಯ ಮಾಡಿಸದಿರುವುದು ಕಂಡುಬಂದಿರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಮೇಲ್ಮನವಿದಾರರು ಸಲ್ಲಿಸಿರುವಂತಹ ಮಧ್ಯಂತರ ಅರ್ಜಿಗಳ ಕುರಿತಾಗಿ ಮೇಲ್ಮನವಿದಾರರ ಪರವಾಗಿ ಹೆಚ್ಚುವರಿ ಸಾಕ್ಷ್ಯ ಮಾಡಿಸಲು ಅನುಮತಿ ನೀಡುವುದು ಅಗತ್ಯತೆ ಇದೆ ಎಂದು ಕಂಡುಬರುತ್ತದೆ. ಅಂತೆಯೆ ಪ್ರತಿವಾದಿಯರಾದ ಎದುರು ದಾರರಿಗೆ ಅವಕಾಶ ನೀಡುವುದು ಅಗತ್ಯತೆ ಇದೆ ಎಂದು ಕಂಡುಬರುತ್ತದೆ. ಹಾಗಾಗಿ ಈ

ದಾವೆಯನ್ನು ಮರು ವಿಚಾರಣೆಗಾಗಿ ಒಪ್ಪಿಸುವಂತಹ ಅಗತ್ಯತೆ ಇದೆ ಎಂದು ಕಂಡುಬರುತ್ತದೆ. ಆದ್ದರಿಂದ ಈ ಮೇಲ್ಕಂಡಂತೆ ನಿರ್ಣಯಿಸಲಾದ ಅಂಶಗಳ ಆಧಾರ ದಲ್ಲಿ, ಅಸಲು ದಾವಾ ಸಂಖ್ಯೆ-67/2018 ರ ದಿನಾಂಕ 08.06.2020 ರ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ, ಸದರಿ ದಾವೆಯನ್ನು ಮರು ವಿಚಾರಣೆಗಾಗಿ ಒಪ್ಪಿಸ ಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

19. ಈ ಮೇಲ್ಕಂಡ ಚರ್ಚೆಯಿಂದಾಗಿ ದಾವಾ ಅನುಸೂಚಿತ ಸ್ವತ್ತಿನ ಕುರಿತು ವಾದಿಯರು ಮತ್ತು ಪ್ರತಿವಾದಿಯರ ನಡುವೆ ವಿವಾದವಿದ್ದು, ಸದರಿ ವಿವಾದದ ಕುರಿತು ನಿರ್ಣಯವನ್ನು ನೀಡುವ ಸಲುವಾಗಿ, ಉಭಯಪಕ್ಷಗಾರರಿಗೆ ನೈಸರ್ಗಿಕ ನಿಯಮಕ್ಕೆ ಅನುಸಾರವಾಗಿ ಅವಕಾಶವನ್ನು ನೀಡುವುದು ಅಗತ್ಯತೆ ಇದೆ ಎಂದು ಕಂಡುಬರುತ್ತದೆ. ಹಾಗಾಗಿ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಉಭಯ ಪಕ್ಷಗಾರರ ಹಕ್ಕು ಮತ್ತು ಹಿಸ್ಸೆಯನ್ನು ನಿರ್ಣಯಿಸುವ ಸಲುವಾಗಿ ಹಾಗೂ ಉಭಯ ಪಕ್ಷಗಾರರ ನಿಲುವುಗಳನ್ನು ಸಾಬೀತುಪಡಿಸುವ ಸಲುವಾಗಿ, ಅಸಲು ದಾವಾ ಸಂಖ್ಯೆ-67/2018 ನ್ನು ಮರು ವಿಚಾರಣೆಗಾಗಿ ನಿಗದಿಪಡಿಸುವುದು ಅಗತ್ಯತೆ ಇದೆ ಎಂದು ಕಂಡುಬರುತ್ತದೆ. ಎದುರುದಾರರು ವಿಚಾರಣಾ ನ್ಯಾಯಾಲಯದಲ್ಲಿ ತಮ್ಮ ವಕೀಲರ ಮೂಲಕ ಹಾಜರಾಗಿರುವುದಿಲ್ಲ ಹಾಗೂ ಸದರಿ ದಾವೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರು ವುದಿಲ್ಲ. ಆದ್ದರಿಂದ ವಾದಿಯರು ಸಲ್ಲಿಸಿರುವಂತಹ ದಾವೆಯ ಕುರಿತು ಪುನಃ ಮರುವಿಚಾರಣೆ ಮಾಡುವಂತಹ ಅಗತ್ಯತೆ ಬಂದಿರುತ್ತದೆ. ಹಾಗಾಗಿ ಅಸಲು ದಾವಾ ಸಂಖ್ಯೆ-67/2018 ರ ದಿನಾಂಕ 08.06.2020 ರ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ, ಸದರಿ ದಾವೆಯನ್ನು ಮರು ವಿಚಾರಣೆಗಾಗಿ ಒಪ್ಪಿಸಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಆದ್ದರಿಂದ ಈ ಮೇಲ್ಕಂಡ ಅಂಶ ಸಂಖ್ಯೆ-2 ರಿಂದ 4 ನ್ನು ಸಕಾರಾತ್ಮಕವೆಂದು ನಿರ್ಣಯಿಸಲಾಗಿದೆ.

**20. ಅಂಶ ಸಂಖ್ಯೆ-5:-** ಈ ಮೇಲ್ಕಂಡಂತೆ ಅಂಶ ಸಂಖ್ಯೆ-1 ರಿಂದ 4 ನ್ನು ನಿರ್ಣಯಿಸಲಾಗಿ, ಈ ಕೆಳಕಂಡಂತೆ ಆದೇಶಿಸಲಾಗುತ್ತದೆ:-

**ಆದೇಶ**

ಹೊಳಲ್ಕೆರೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ಅಸಲು ದಾವಾ ಸಂಖ್ಯೆ-67/2018 ರ ದಿನಾಂಕ 08.06.2020 ರ ತೀರ್ಪು ಮತ್ತು ಡಿಕ್ರಿಯ ವಿರುದ್ಧ ಮೇಲ್ಮನವಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 41 ನಿಯಮ 1 ಸಹವಾಚಕ ಕಲಂ 96 ರ ಅಡಿಯಲ್ಲಿ ಸಲ್ಲಿಸಿದಂತಹ ಮೇಲ್ಮನವಿಯನ್ನು ಪುರಸ್ಕರಿಸಲಾಗಿದೆ. ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ.

ಹೊಳಲ್ಕೆರೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ಅಸಲು ದಾವಾ ಸಂಖ್ಯೆ-67/2018 ರ ದಿನಾಂಕ 08.06.2020 ರ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಲಾಗಿದೆ.

ಮೇಲ್ಮನವಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 41 ನಿಯಮ 27 ಸಹವಾಚಕ 151 ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-8 ಮತ್ತು 9 ನ್ನು ತಲಾ ರೂ.2,500/- ಖರ್ಚು ಸಹಿತ ಪುರಸ್ಕರಿಸಲಾಗಿದೆ.

ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 41 ನಿಯಮ 23 ಮತ್ತು ನಿಯಮ 23(ಎ) ರ ಅಡಿಯಲ್ಲಿ ಅಸಲು ದಾವಾ ಸಂಖ್ಯೆ-67/2018 ನ್ನು ವಿಚಾರಣಾ ನ್ಯಾಯಾಲಯಕ್ಕೆ ಮರು ವಿಚಾರಣೆಗಾಗಿ ಒಪ್ಪಿಸಿದ್ದು, ವಿಚಾರಣಾ ನ್ಯಾಯಾಲಯವು ಪ್ರತಿವಾದಿಯರಿಗೆ ಪ್ರತಿವಾದ ಪತ್ರ ಸಲ್ಲಿಸಲು, ತದನಂತರದಲ್ಲಿ ವಿವಾದಾಂಶಗಳನ್ನು ರೂಪಿಸಲು ಮತ್ತು ವಾದಿಯರ ಪರವಾಗಿ ಸಾಕ್ಷ್ಯ ಮಾಡಿಸಲು ಹಾಗೂ ಪ್ರತಿವಾದಿಯರ ಪರವಾಗಿ ಸಾಕ್ಷ್ಯ ಮಾಡಿಸಲು ಅವಕಾಶವನ್ನು ನೀಡುವಂತೆ ಸೂಚಿಸಲಾಗಿದೆ.

ವಿಚಾರಣಾ ನ್ಯಾಯಾಲಯದ ಕಡತದೊಂದಿಗೆ ಈ ತೀರ್ಪಿನ ನಕಲನ್ನು ವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸಿಕೊಡತಕ್ಕದ್ದು.

ವಿಚಾರಣಾ ನ್ಯಾಯಾಲಯದ ಕಡತದೊಂದಿಗೆ ಮೇಲ್ಮನವಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-8 ಮತ್ತು 9ರ ದೃಢೀಕೃತ ಪ್ರತಿಗಳನ್ನು ಹಾಗೂ ಮೂಲ ದಾಖಲಾತಿಗಳನ್ನು ವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸಿಕೊಡುವಂತೆ ಕಛೇರಿಗೆ ಸೂಚಿಸಲಾಗಿದೆ.

ಮೇಲ್ಮನವಿದಾರರು ಎದುರುದಾರರಾದ ಪ್ರತಿವಾದಿ 1(ಎ) ರವರಿಗೆ ವಿಚಾರಣಾ ನ್ಯಾಯಾಲಯದಲ್ಲಿ ರೂ.5,000/- ಖರ್ಚನ್ನು ಪಾವತಿಸುವಂತೆ ಸೂಚಿಸಲಾಗಿದೆ.

ಉಭಯ ಪಕ್ಷಗಾರರು ದಿನಾಂಕ 06.07.2026 ರಂದು ವಿಚಾರಣಾ ನ್ಯಾಯಾಲಯದಲ್ಲಿ ಹಾಜರಾಗುವಂತೆ ಸೂಚಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 16 ನೇ ಜೂನ್, 2026 ರಂದು ನಾನು ಉದ್ಘೋಷಿಸಿದ್ದೇನೆ.)

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

RAGHURAMA
N S

Digitally signed
by RAGHURAMA
N S
Date: 2026.06.17
10:34:02 +0530